ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಜುಲೈ 04, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 51 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

# ಚಿತ್ರದುರ್ಗ ಮುರುಘಾ ಮಠಕ್ಕೆ ತಾತ್ಕಾಲಿಕ ಆಡಳಿತಾಧಿಕಾರಿಯಾಗಿ ನ್ಯಾಯಾಧೀಶರು

ಬೆಂಗಳೂರು, ಜು.3- ಚಿತ್ರದುರ್ಗದ ಮುರುಘಾ ಮಠಕ್ಕೆ ತಾತ್ಕಾಲಿಕ ಆಡಳಿತಾಧಿಕಾರಿಯನ್ನಾಗಿ ಜಿಲ್ಲಾ ಪ್ರಧಾನ ನ್ಯಾಯಾಧೀಶರನ್ನು ನೇಮಕ ಮಾಡಿ ಹೈಕೋರ್ಟ್ ಆದೇಶಿಸಿದೆ.

ಸೋಮವಾರ ಪ್ರಕರಣಕ್ಕೆ ಸಂಬಂಧಿಸಿದ ಮೇಲ್ಮನವಿಯನ್ನು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠವು, ಚಿತ್ರದುರ್ಗ ಜಿಲ್ಲಾ ಪ್ರಧಾನ ನ್ಯಾಯಾಧೀಶರು ಜು.4ರ ಮಂಗಳವಾರ ಬೆಳಗ್ಗೆ 11 ಗಂಟೆಗೆ ಮಠದ ಆಡಳಿತಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಬೇಕು ಎಂದು ನಿರ್ದೇಶಿಸಿದೆ.

ಜಿಲ್ಲಾ ನ್ಯಾಯಾಧೀಶರು ಯಾವುದೇ ಪ್ರಮುಖ ನೀತಿ ನಿರ್ಧಾರ ಕೈಗೊಳ್ಳಬಾರದು. ಮಠ ಮತ್ತು ವಿದ್ಯಾಪೀಠದ ದೈನಂದಿನ ವ್ಯವಹಾರಗಳನ್ನು ಮಾತ್ರವೇ ನಿಭಾಯಿಸಬೇಕು. ಈ ನಿಟ್ಟಿನಲ್ಲಿ ಯಾವುದಾದರೂ ನೆರವು ಬೇಕಾದಲ್ಲಿ ಚಿತ್ರದುರ್ಗ ಜಿಲ್ಲಾಧಿಕಾರಿಯನ್ನು ಲಿಖಿತವಾಗಿ



ಕೋರಬಹುದು. ಅದರನ್ವಯ ಜಿಲ್ಲಾಧಿಕಾರಿ ತಕ್ಷಣವೇ ಅಗತ್ಯ ನೆರವು ಕಲ್ಪಿಸಬೇಕು ಎಂದು ನಿರ್ದೇಶಿಸಿದೆ. ಮೇಲ್ಮನವಿಗೆ ಸಂಬಂಧಿಸಿದಂತೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿದೆ.

ಶಿವಮೂರ್ತಿ ಮುರುಘಾ ಶರಣರು ಪೋಕ್ಸೋ ಪ್ರಕರಣದಲ್ಲಿ ಆರೋಪಿಯಾಗಿ ಚಿತ್ರದುರ್ಗ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ, ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ ಅವರನ್ನು 2022ರ ಡಿಸೆಂಬರ್ 13ರಂದು ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿತ್ತು.

ಸರ್ಕಾರದ ಈ ಕ್ರಮವನ್ನು ಪ್ರಶ್ನಿಸಿ ಮಠದ ತಾತ್ಕಾಲಿಕ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ಮತ್ತು ಭಕ್ತರು, ಹೈಕೋರ್ಟ್ ಮೆಟ್ಟಿಲೇರಿದ್ದರು. ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ಆಡಳಿತಾಧಿಕಾರಿ ನೇಮಕವನ್ನು ರದ್ದುಪಡಿಸಿ, ಮಠ-ಮಾನ್ಯಗಳಲ್ಲಿ ಸರ್ಕಾರದ ಹಸ್ತಕ್ಷೇಪ ಸಲ್ಲದು ಎಂಬ ಅಭಿಪ್ರಾಯ ವ್ಯಕ್ತಪಡಿಸಿತ್ತು.

'ಶರಣರು ಜೈಲಿನಲ್ಲಿರುವ ಕಾರಣ, ಮಠ, ವಿದ್ಯಾಪೀಠ ಹಾಗೂ ಶೈಕ್ಷಣಿಕ ಸಂಸ್ಥೆಗಳ ಆಡಳಿತ ನಿರ್ವಹಣೆಗಾಗಿ ಮಠದ ಭಕ್ತರು, ವೀರಶೈವ, ಲಿಂಗಾಯತ (3ನೇ ಪುಟಕ್ಕೆ)



# ಗುರು ಮಂದಿರಗಳಲ್ಲಿ ಪೌರ್ಣಿಮೆ ಸಂಭ್ರಮ



ದಾವಣಗೆರೆ, ಜು. 3- ನಗರದಲ್ಲಿ ಸೋಮವಾರ ಶ್ರದ್ಧಾ ಭಕ್ತಿಯಿಂದ ಗುರು ಪೌರ್ಣಿಮೆ ಆಚರಿಸಲಾಯಿತು.

ಶ್ರೀ ಸಾಯಿಬಾಬಾ ಮಂದಿರಗಳು, ಶ್ರೀ ರಾಘವೇಂದ್ರ ಸ್ವಾಮಿ ಮಠಗಳಲ್ಲಿ ವಿಶೇಷ ಪೂಜೆ, ಪ್ರಾರ್ಥನೆ, ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ನಡೆದವು. ಭಕ್ತರು ಬೆಳಿಗ್ಗೆಯಿಂದಲೇ ಸರದಿ ಸಾಲಿನಲ್ಲಿ ನಿಂತು ಗುರುವಿನ ದರ್ಶನ ಪಡೆದರು.

**ಗುರು ಜಾತ್ರೆ:** ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಗುರು ಪೂರ್ಣಿಮೆ ಉತ್ಸವವನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಬೆಳಿಗ್ಗೆ 6 ಗಂಟೆಯಿಂದಲೇ ಕಾಕಡಾರತಿ ಮೂಲಕ ಉತ್ಸವಕ್ಕೆ ಚಾಲನೆ ನೀಡಲಾಯಿತು. 9 ಗಂಟೆಗೆ ದೀಪಾರಾಧನೆ, ಕಲಶ ಸ್ಥಾಪನೆ, ಗೋಪುರ ಧ್ವಜಾರೋಹಣ ಕಾರ್ಯಕ್ರಮಗಳು ನಡೆದವು. ವಿಶೇಷ ಅಲಂಕಾರ ಮಾಡಲಾಗಿತ್ತು.

ಬೆಳಿಗ್ಗೆಯಿಂದಲೇ ಭಕ್ತರು ಸರದಿ ಸಾಲಿನಲ್ಲಿ ನಿಂತು ಸಾಯಿಬಾಬಾ ಅವರ ದರ್ಶನ ಮಾಡಿದರು. ಟ್ರಸ್ಟ್ ವತಿಯಿಂದ ಭಕ್ತರಿಗೆ ಬಾಬಾ ಅವರ ಬೆಳ್ಳಿಯ ಮೂರ್ತಿಗೆ ಹಾಲಿನ ಅಭಿಷೇಕ ಮಾಡಲು ಅವಕಾಶ ಕಲ್ಪಿಸಲಾಗಿತ್ತು.

ಮಂದಿರದ ಸುತ್ತಲಿನ ವಾತಾವರಣ ಜಾತ್ರೆಯನ್ನು ನೆನಪು ಮಾಡುವಂತಿತ್ತು. ಮಂದಿರಕ್ಕೆ ಹೋಗುವ ರಸ್ತೆಗೆ ಪೆಂಡಾಲ್ ಹಾಕಲಾಗಿತ್ತು. ರಸ್ತೆ ಬದಿಯಲ್ಲಿ ಹಣ್ಣು, ಹೂ, ಆಟಿಕೆ ಸೇರಿದಂತೆ ವಿವಿಧ ಬಗೆಯ ವಸ್ತುಗಳ ಮಾರಾಟಗಾರರಿದ್ದರು.

ದರ್ಶನಕ್ಕೆ ಜನ ನಾ ಮುಂದು ತಾ ಮುಂದು ಎಂದು ಧಾವಿಸುತ್ತಿದ್ದುದು ಕಂಡು ಬಂತು. ತುರ್ತು ಸೇವೆಗೆ 50 ರೂ.ಗಳ ಟಿಕೆಟ್ ನೀಡಲಾಗಿತ್ತು. ಅಲ್ಲಿಯೂ ಜನಸಂದಣಿ ಹೆಚ್ಚಾಗಿತ್ತು. ಜನರ ನಿಯಂತ್ರಣಕ್ಕೆ ಟ್ರಸ್ಟ್‌ನ ಸೇವಾ ಕರ್ತರು ಹರಸಾಹಸ ಪಡಬೇಕಾಯಿತು.

ಮಂದಿರದ ಮುಂಭಾಗ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ನೆಲ ಮಹಡಿ, ಮೊದಲ ಹಾಗೂ ಎರಡನೇ ಮಹಡಿಯಲ್ಲಿ ಅನ್ನ ಸಂತರ್ಪಣೆ ಕಾರ್ಯ ಅಚ್ಚುಕಟ್ಟಾಗಿ ನಡೆಯಿತು.

ಗುರುಪೂರ್ಣಿಮೆ ಅಂಗವಾಗಿ ಸಾಯಿ (3ನೇ ಪುಟಕ್ಕೆ)

# ಭ್ರಷ್ಟಾಚಾರ ನಿವಾರಣೆಗೆ ಕಾನೂನು ಜಾರಿ

## ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲ ಗೆಹ್ಲೋಟ್



ಬೆಂಗಳೂರು, ಜು. 3- ಭ್ರಷ್ಟಾಚಾರ ನಿರ್ಮೂಲನೆ, ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರ ಕಡಿಮೆ ಮಾಡುವುದು, ಹಸಿವು ಮುಕ್ತ ರಾಜ್ಯ ಮಾಡುವುದೇ ನನ್ನ ಸರ್ಕಾರದ ಪರಮ ಗುರಿ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ತಿಳಿಸಿದ್ದಾರೆ.

ನೂತನ ಸರ್ಕಾರ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಮಾತನಾಡಿದ ಅವರು, ಮುಂದಿನ 5 ವರ್ಷಗಳಲ್ಲಿ ರಾಷ್ಟ್ರಕ್ಕೆ ಕರ್ನಾಟಕವನ್ನು ಮಾದರಿಯಾಗಿ ತೋರ್ಪಡಿಸುವ ಗುರಿಯೊಂದಿಗೆ ಕೆಲಸ ಮಾಡಲಿದೆ ಎಂದರು.

ಭ್ರಷ್ಟಾಚಾರವನ್ನು ಮೂಲೋತ್ಪಾಟನೆ ಮಾಡಲು ಆಡಳಿತಾತ್ಮಕ, ಶಾಸನಾತ್ಮಕ ಕಾನೂನು ತರುವುದಾಗಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರಾಜ್ಯಪಾಲರ ಮೂಲಕ ಘೋಷಣೆ ಮಾಡಿಸಿದೆ.

ಉಳ್ಳವರು ಮತ್ತು ಇಲ್ಲದವರು ನಡುವಿನ ಅಂತರವನ್ನು ತುಸುವಾದರೂ ಕಡಿಮೆ ಮಾಡುವ ಉದ್ದೇಶದಿಂದಲೇ 5 ಗ್ಯಾರಂಟಿ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸುತ್ತಿದೆ ಎಂದು ಸಮರ್ಥಿಸಿಕೊಂಡರು.

ಹಸಿದವರಿಗೆ ಅನ್ನ ನೀಡದ ಸರ್ಕಾರ ಅತ್ಯಂತ ಜನದ್ರೋಹಿ ಸರ್ಕಾರವೆಂದು ಕರೆಸಿಕೊಳ್ಳುತ್ತದೆ. ಬಡವರು, ದುಡಿಯುವ ವರ್ಗದ ಜನರು, ವಲಸೆ ಕಾರ್ಮಿಕರು ಮುಂತಾದವರ ಹಸಿವನ್ನು ತಣಿಸಲು ನಾವು ಅನ್ನಭಾಗ್ಯ ಯೋಜನೆಯನ್ನು ವಿಸ್ತರಿಸಿರುವುದಲ್ಲದೆ, ಇಂದಿರಾ ಕ್ಯಾಂಟೀನ್‌ಗಳನ್ನು ಪುನರಾರಂಭಿಸಿರುವುದಾಗಿ ಹೇಳಿದರು.

ಗೃಹಜ್ಯೋತಿ ಯೋಜನೆಯಡಿ 200 ಯುನಿಟ್ ವಿದ್ಯುತ್ ಉಚಿತ. ಗೃಹಲಕ್ಷ್ಮಿ ಯೋಜನೆಯಡಿ ಕುಟುಂಬದ ಯಜಮಾನಿಗೆ ಮಾಸಿಕ 2000 ರೂ. ಯುವನಿಧಿಯಡಿ (3ನೇ ಪುಟಕ್ಕೆ)

# ದೆಹಲಿ ವಿಶೇಷ ಪ್ರತಿನಿಧಿಯಾಗಿ ಟಿ.ಬಿ. ಜಯಚಂದ್ರ



ಬೆಂಗಳೂರು, ಜು. 3 - ಪಕ್ಷದ ಹಿರಿಯ ಸದಸ್ಯ ಟಿ.ಬಿ.ಜಯಚಂದ್ರ ಅವರನ್ನು ರಾಜ್ಯ ಸರ್ಕಾರದ ದೆಹಲಿಯ ವಿಶೇಷ ಪ್ರತಿನಿಧಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಕ ಮಾಡಿದ್ದಾರೆ.

ಜಯಚಂದ್ರ ಅವರಿಗೆ ಸಂಪುಟ ದರ್ಜೆಯ ಸ್ಥಾನಮಾನ ಕಲ್ಪಿಸಿದ್ದು, ತಮ್ಮ ಬಳಗದಲ್ಲಿರುವ ಅಶೋಕ್ ಪಟ್ಟಣಶೆಟ್ಟಿ (3ನೇ ಪುಟಕ್ಕೆ)

# ವಿದ್ಯೆ ಜೊತೆಗೆ ಸಂಸ್ಕಾರ-ಪ್ರಜ್ಞಾವಂತಿಕೆ ಮುಖ್ಯ

## ಸಿರಿಗೆರೆ: ಗುರು ಪೌರ್ಣಿಮೆ ಕಾರ್ಯಕ್ರಮದಲ್ಲಿ ತರಳಬಾಳು ಸ್ವಾಮೀಜಿ ಅಭಿಮತ



ಸಿರಿಗೆರೆ ಜು. 3- ವಿದ್ಯೆಯ ಜೊತೆಗೆ ಸಂಸ್ಕಾರ ಮತ್ತು ಪ್ರಜ್ಞಾವಂತಿಕೆ ಮುಖ್ಯ ಎಂದು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಇಂದು ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಭವನದಲ್ಲಿ ಏರ್ಪಡಿಸಿದ್ದ ಗುರು ಪೂರ್ಣಿಮೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಪೂಜ್ಯರು ಆಶೀರ್ವಚನ ನೀಡಿದರು.

ಅಕ್ಷರ ಜ್ಞಾನ ಪಡೆದವರನ್ನು ಸಾಕ್ಷರರು ಎನ್ನಲಾಗುತ್ತದೆ. ಆದರೆ ಸಾಕ್ಷರ ಪದ ತಿರುವು ಮುರುವು ಆಗಿ ಕೆಲವರು ರಾಕ್ಷಸರಾಗುತ್ತಿರುವುದು ವಿಷಾದನೀಯ. ಅಕ್ಷರದ ಜ್ಞಾನದಿಂದ ಪದವೀಧರರಾಗಬಹುದು. ಆದರೆ ಅನುಭವ ಮತ್ತು ವಿವೇಕದಿಂದ ಸತ್ಪ್ರಜೆಯಾಗಬೇಕು. ಭಾರತದಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ಅವರ (3ನೇ ಪುಟಕ್ಕೆ)






# ಶರಣ ಹಡಪದ ಅಪ್ಪಣ್ಣ ಜಾತ್ಯತೀತ ಸಮಾಜಕ್ಕೆ ಆದರ್ಶ



**ಜಗಳೂರಿನ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಜಿ. ಸಂತೋಷ್ ಕುಮಾರ್**

ಜಗಳೂರು,ಜು.3- 12ನೇ ಶತಮಾನದಲ್ಲಿ ಬಸವಣ್ಣನವರ ಆಪ್ತರಾಗಿದ್ದ ನಿಜ ಸುಖಿ ಹಡಪದ ಅಪ್ಪಣ್ಣ ಜಾತ್ಯತೀತ ಸಮಾಜಕ್ಕೆ ಆದರ್ಶವಾಗಿದ್ದಾರೆ ಎಂದು ತಹಶೀಲ್ದಾರ್ ಜಿ.ಸಂತೋಷ್ ಕುಮಾರ್ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶಿವಶರಣ ಹಡಪದ ಅಪ್ಪಣ್ಣನವರ ಜಯಂತಿ ಅಂಗವಾಗಿ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಅನುಭವ ಮಂಟಪದಲ್ಲಿ ಬಸವಣ್ಣನವರು ಸಮಾಜವನ್ನು ತಿದ್ದಿ ತೀಡಲು ವಚನಕಾರರ ಸಾಮಾಜಿಕ ಕ್ರಾಂತಿ ಹಾಗೂ ಶಿವಶರಣ ವಚನ ಕಾರರ ಸಮಾನತೆ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರಪಂಚದ ಪಾಶ್ಚಿಮಾತ್ಯ ದೇಶಗಳಲ್ಲಿ ಅನುಸರಿಸುತ್ತಿರುವುದು ಶ್ಲಾಘನೀಯ ಎಂದರು. ಪ್ರತಿಯೊಂದು ಸಮುದಾಯದ ಕುಲಕಸುಬಿನ ಬಗ್ಗೆ ಕೀಳರಿಮೆ ಸಲ್ಲದು. ವೃತ್ತಿಯನ್ನು ಸಮಾಜ ಗೌರವಿಸಬೇಕು. ಸರ್ಕಾರದ ಸೌಲಭ್ಯಗಳ ಸದುಪಯೋಗ ಪಡೆದುಕೊಂಡು ಮುಖ್ಯವಾಹಿನಿಗೆ ಬರಬೇಕು ಎಂದು ಸಲಹೆ ನೀಡಿದರು.

ಹಡಪದ ಸಮಾಜ ಸಂಘದ ತಾಲೂಕು ಅಧ್ಯಕ್ಷ ವಿಜಯ್ ಕುಮಾರ್ ಮಾತನಾಡಿ, ರಾಜ್ಯದಲ್ಲಿ ಅಲ್ಪಸಂಖ್ಯಾತರಾಗಿರುವ ಹಡಪದ ಸಮಾಜಕ್ಕೆ ಸರ್ಕಾರ ನಿಗಮ ಮಂಡಳಿ ಸ್ಥಾಪಿಸಿರುವುದು ಸ್ವಾಗತಾರ್ಹ ಎಂದರು.

ಸರ್ಕಾರ ಹಡಪದ ಸಮುದಾಯಕ್ಕೆ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಸ್ಥಾನಮಾನ ಕಲ್ಪಿಸಬೇಕು. ಕ್ಷೌರಿಕ ವೃತ್ತಿ ಅವಲಂಬಿಸಿರುವ ನಮ್ಮನ್ನು ಕೀಳರಿಮೆಯಿಂದ ಕಾಣಬಾರದು. ನಮ್ಮ ಸಮಾಜದ ವ್ಯಕ್ತಿ ಎದುರಿಗೆ ಆಗಮಿಸಿದರೆ ಅಪಶಕುನ ಎಂಬ ಮೂಢನಂಬಿಕೆಯ ದೃಷ್ಟಿಕೋನ ಬದಲಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್ ಮೂರ್ತಿ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮಿಥುನ್ ಕಿಮಾವತ್, ಸಮಾಜದ ಮುಖಂಡರಾದ ಷಡಕ್ಷರಿ, ತಿಪ್ಪೇಸ್ವಾಮಿ ಮುಂತಾದವರು ಇದ್ದರು.

# ಮಕ್ಕಳಿಗೆ ಹಣ, ಆಸ್ತಿ ಮಾಡಿ ; ಆದರೆ ಮಮಕಾರ ಬೇಡ : ಶ್ರೀ ಮಲ್ಲಯ್ಯಜ್ಜ



ರಾಣೇಬೆನ್ನೂರು,ಜು.3- ಮಕ್ಕಳನ್ನು ಚೆನ್ನಾಗಿ ಬೆಳೆಸಿರಿ, ಅವರಿಗೆ ಆಸ್ತಿ ಮಾಡಿರಿ, ಅವರು ಸುಖವಾಗಿ ಜೀವನ ನಡೆಸಲಿ. ಆದರೆ ನೀವು ಮಮಕಾರ ಇಟ್ಟುಕೊಳ್ಳಬೇಡಿ. ಮಮಕಾರ ನಿಮ್ಮನ್ನು ಪಾಪದೆಡೆಗೆ ಒಯ್ಯಲಿದೆ ಎಂದು ಸಿದ್ದಾರೂಢ ಮಠದ ಪೀಠಾಧಿಪತಿ ಶ್ರೀ ಮಲ್ಲಯ್ಯಜ್ಜ ನುಡಿದರು.

ಶ್ರೀ ಮಠದಲ್ಲಿ ಗುರುಪೂರ್ಣಿಮೆ ಪ್ರಯುಕ್ತ ನಡೆದ ವಿಶೇಷ ಪೂಜಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀ ಗಳು ಆಶೀರ್ವಚನ ನೀಡಿದರು.

ಪಾಪ, ಪುಣ್ಯ ಎರಡು ಮನಸ್ಸಿನಲ್ಲಿವೆ. ಮನಸ್ಸು ಹೇಳಿದಂತೆ ಕೇಳಿದರೆ ಮೋಹ, ಮದ, ಮತ್ಸರಗಳೊಂದಿಗೆ ಪಾಪ ಮಾಡಲು ಪ್ರೇರೇಪಿಸುತ್ತದೆ. ಗುರುವಿನ ಮಾರ್ಗದರ್ಶನ ಪಡೆದು ಪುಣ್ಯವಂತರಾಗಿ ಬಾಳಬೇಕು ಎಂದು ಮಲ್ಲಯ್ಯಜ್ಜ ಹೇಳಿದರು.

ಸಂತರು, ಶರಣರು ಸೇರಿದಂತೆ ಜನ್ಮ ಪಡೆದ

**ರಾಣೇಬೆನ್ನೂರು**

ಪ್ರತಿಯೊಬ್ಬರಿಗೂ ಗುರು ವಿದ್ದಾನೆ. ಗುರುವಿನ ಮಾರ್ಗದರ್ಶನ ಪಡೆದು ಸನ್ಮಾರ್ಗದತ್ತ ನಡೆದರೆ ಪಾಪ ನಿಮ್ಮಿಂದ ದೂರವಾಗಿ ಪುಣ್ಯ ನಿಮ್ಮ ಬದುಕನ್ನು ಸಾರ್ಥಕ ಪಡಿಸುತ್ತದೆ. ಗುರು ಪೂಜೆಯೊಂದಿಗೆ ಬದುಕನ್ನು ಸಾರ್ಥಕ ಪಡಿಸಿಕೊಂಡವರು ಜಗತ್ತಿನಾದ್ಯಂತ ಬಹಳಷ್ಟು ಶರಣರು, ಮಹಾತ್ಮರು ಆಗಿಹೋಗಿದ್ದಾರೆ ಎಂದು ಮಲ್ಲಯ್ಯಜ್ಜ ನುಡಿದರು.

ಕರಬಸಪ್ಪ ಹಳ್ಳಳ್ಳಿ, ದೇವೇಂದ್ರಪ್ಪ, ಪೂರ್ಣಿಮಾ ಅಯ್ಯನಗೌಡ್ರ, ಎರೇಸೀಮಿ, ಪೂರ್ಣಿಮಾ ಕುರವತ್ತಿ, ಕರಬಸಪ್ಪ ಮಲ್ಲಾಡದ, ಕುಮಾರ ಹಾಲುಮತ, ಶೈಲಶ್ರೀ ಬಣಕಾರ, ಜಿಗಳಿ ಆನಂದಪ್ಪ, ಕೊಕ್ಕನೂರು ಸೋಮಶೇಖರ್, ನಿಟ್ಟೂರು ರಾಮಪ್ಪ, ಪ್ರಕಾಶ ಜಿಗಳಿ, ರಾಣೇಬೆನ್ನೂರು, ಜಿಗಳಿ ಇನ್ನಿತರೆ ಗ್ರಾಮಗಳ ಭಕ್ತರು ಪಾಲ್ಗೊಂಡಿದ್ದರು.

## ಉದ್ಯೋಗಕ್ಕಾಗಿ ಜಮೀನು : ಬಿಹಾರದ ಉಪಮುಖ್ಯಮಂತ್ರಿ ವಿರುದ್ಧ ಸಿಬಿಐ ಆರೋಪ ಪಟ್ಟಿ

ನವದೆಹಲಿ, ಜೂ. 3 – ಉದ್ಯೋಗಕ್ಕಾಗಿ ಜಮೀನು ಹಗರಣಕ್ಕೆ ಸಂಬಂಧಿಸಿದಂತೆ ಬಿಹಾರದ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ವಿರುದ್ಧ ಸಿ.ಬಿ.ಐ. ಆರೋಪ ಪಟ್ಟಿ ದಾಖಲಿಸಿದೆ.

ತೇಜಸ್ವಿ ತಂದೆ ಹಾಗೂ ಮಾಜಿ ರೈಲ್ವೆ ಸಚಿವ ಲಾಲು ಪ್ರಸಾದ್ ಮತ್ತು ತಾಯಿ ಹಾಗೂ ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ ಸೇರಿದಂತೆ ಒಟ್ಟು 17 ಜನರ ವಿರುದ್ಧ ಆರೋಪ ಪಟ್ಟಿ ದಾಖಲಿಸಲಾಗಿದೆ. ಮೊದಲ ಆರೋಪ ಪಟ್ಟಿ ದಾಖಲಿಸಿ ತನಿಖೆ ನಡೆಸಿದ ಸಂದರ್ಭದಲ್ಲಿ ಪತ್ತೆಯಾದ ಮಾಹಿತಿ ಆಧರಿಸಿ, ಎರಡನೇ ಆರೋಪ ಪಟ್ಟಿ ದಾಖಲಿಸಿರುವುದಾಗಿ ಸಿ.ಬಿ.ಐ. ತಿಳಿಸಿದೆ.

ಲಾಲು ಪ್ರಸಾದ್ ಅವರು 2004 ರಿಂದ 2009ರ ನಡುವೆ ಯು.ಪಿ.ಎ.ಸರ್ಕಾರದಲ್ಲಿ ರೈಲ್ವೆ ಸಚಿವರಾಗಿದ್ದರು. ಈ ಸಂದರ್ಭದಲ್ಲಿ ನಿಯಮಗಳನ್ನು ಉಲ್ಲಂಘಿಸಿ, ನೇಮಕಾತಿ ಮಾಡಲಾಗಿತ್ತು. ಕಡಿಮೆ ಬೆಲೆಯಲ್ಲಿ ಲಾಲು ಕುಟುಂಬಕ್ಕೆ ಜಮೀನು ಮಾರಿದವರಿಗೆ ರೈಲ್ವೆಯಲ್ಲಿ ಉದ್ಯೋಗ ನೀಡಲಾಗಿತ್ತು ಎಂದು ಸಿ.ಬಿ.ಐ. ಆರೋಪಿಸಿದೆ.

## ರಾಣೇಬೆನ್ನೂರಿನಲ್ಲಿ ಇಂದು ಮೋದಿ ಅವರ ಸಾಧನೆ ಸಂವಾದ

ಪ್ರಧಾನಿ ನರೇಂದ್ರ ಮೋದಿ 9 ವರ್ಷದ ಸಾಧನೆ ಕುರಿತು ರಾಣೇಬೆನ್ನೂರಿನ ವರ್ತಕರ ಜೊತೆ ಇಂದು ಸಂಜೆ 4 ಕ್ಕೆ ಬಿಜೆಪಿ ಕಛೇರಿಯಲ್ಲಿ ಬೆಂಗಳೂರಿನ ಆರ್ಥಿಕ ತಜ್ಞ ಪ್ರಶಸ್ತಿ ವಿಶ್ವನಾಥಭಟ್ ಅವರು ಸಂವಾದ ನಡೆಸಲಿದ್ದಾರೆ ಎಂದು ವರ್ತಕರ ಸಂಘದ ಅಧ್ಯಕ್ಷ ಜಿ.ಜಿ.ಹೊಟ್ಟಿಗೌಡ್ರ ತಿಳಿಸಿದ್ದಾರೆ.

## ನಾಳೆ ವೀರಶೈವ ಲಿಂಗಾಯತ ನೂತನ ಸಚಿವರು-ಶಾಸಕರಿಗೆ ಅಭಿನಂದನೆ

ದಾವಣಗೆರೆ, ಜು. 3- ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ವತಿಯಿಂದ ನಾಡಿದ್ದು ದಿನಾಂಕ 5ರ ಬುಧವಾರ ಸಂಜೆ 5.30ಕ್ಕೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ವೀರಶೈವ ಲಿಂಗಾಯತ ನೂತನ ಸಚಿವರು, ಶಾಸಕರ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ಮಧ್ಯ ಕರ್ನಾಟಕ ವಿಭಾಗದ ಉಪಾಧ್ಯಕ್ಷ ಲೋಕೇಶಯ್ಯ ಎಂ. ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಭಾಪುರಿ ಪೀಠದ ಶ್ರೀ ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಗೌಡಗಾಂವ ಹಿರೇಮಠದ ಶ್ರೀ ಡಾ.ಜಯಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕೇಂದ್ರ ಸರ್ಕಾರದ ರಾಸಾಯನಿಕ ಹಾಗೂ ರಸಗೊಬ್ಬರ, ಇಂಧನ ಖಾತೆ ರಾಜ್ಯ ಸಚಿವ ಭಗವಂತ ಖೂಬಾ, ತೆಲಂಗಾಣದ ಲೋಕಸಭಾ ಸದಸ್ಯ ಬಿ.ಬಿ. ಪಾಟೀಲ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಹಿರಿಯ ಶಾಸಕ .ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸೇರಿದಂತೆ 16ನೇ ವಿಧಾನಸಭೆಗೆ ಆಯ್ಕೆಯಾದ ಎಲ್ಲಾ ಶಾಸಕರುಗಳು ಪಾಲ್ಗೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಹೆಚ್.ಸಿ. ಭಾಗ್ಯ, ಓಂಕಾರಮೂರ್ತಿ ಕೆ.ಎಂ., ಗಂಗಾಧರ ಎನ್.ಎಸ್.ಎಂ., ಕೆ.ವಿ. ಕಿರಣ್, ಶಶಿಕುಮಾರ್ ಇತರರು ಉಪಸ್ಥಿತರಿದ್ದರು.

## ಹರಿಹರದ ಸಾಯಿಬಾಬಾ ಮಂದಿರದಲ್ಲಿ ಗುರು ಪೂರ್ಣಿಮೆ





ಹರಿಹರ, ಜು. 3 - ನಗರದ ಕೇಶವನಗರ ಪಾಟೀಲ್ ಬಡಾವಣೆಯ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಗುರುಪೂರ್ಣಿಮೆ ಪ್ರಯುಕ್ತ ಶ್ರೀ ಸಾಯಿಬಾಬಾ, ಕಾಶಿ ವಿಶ್ವನಾಥ ಸ್ವಾಮಿ, ವಿನಾಯಕ ಸ್ವಾಮಿ, ನವಗ್ರಹ ಸ್ವಾಮಿ ಜೊತೆಗೆ ಸತ್ಯನಾರಾಯಣ ಸ್ವಾಮಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಗಂಗಮ್ಮ ಪಟೇಲ್ ಮಲ್ಲಪ್ಪ ಸೇವಾ ಟ್ರಸ್ಟ್ ಅಧ್ಯಕ್ಷ ಜಿ. ಬಸವರಾಜ್ ಪಾಟೀಲ್, ಉಪಾಧ್ಯಕ್ಷ ಹನುಮಂತಪ್ಪ ಸುರ್ವೆ, ಖಜಾಂಚಿ ಜೆ.ಎಂ. ಲಿಂಗರಾಜು ಪಟೇಲ್, ಸಹ ಕಾರ್ಯದರ್ಶಿ ಚಂದ್ರಶೇಖರ್ ಸರಫದ, ನಿರ್ದೇಶಕ ಮಾದೇವಪ್ಪ ಡಿ. ಸರಫದ, ಎಸ್. ಎಸ್.ಸಂಗಳನಾಮತ್, ದೊರೆಸ್ವಾಮಿ, ಭೀಮಣ್ಣ ಐರಣಿ, ಬ್ಯಾಂಕ್ ರಾಮಣ್ಣ, ಶಶಿಧರ್ ಆನ್ವೇರಿ, ಅರ್ಚಕ ಕುಮಾರ ಸ್ವಾಮಿ ಹಿರೇಮಠ, ಅಮರಾವತಿ ಗೌಡಪ್ಪ, ರಡ್ಡಿ ಹನುಮಂತಪ್ಪ, ಹಾಗೂ ಮಹಿಳಾ ಘಟಕದ ಜಿ.ಪಿ. ರೇಣುಕಾ, ಅರುಣಾ, ಗೀತಾ ಕಾಟ್ವೆ, ಶೃತಿ ಕಬಾಡೆ, ಆಶಾ, ಲತಾ, ಸುಶೀಲಾ, ಶಂಕುತಲಾ, ಶೋಭಾ, ಸುನೀತಾ, ಮಂಜಮ್ಮ, ಪುಷ್ಪಾ, ಶೋಭಾ, ಟಿ.ಯಶೋಧ ಮತ್ತಿತರರು ಹಾಜರಿದ್ದರು.

ಮಂದಿರದ ಮಹಿಳಾ ಘಟಕದ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ರೇಣುಕಾ ಜೆ.ಪಿ. ಅರುಣಾ, ಶೃತಿ, ಗೀತಾ, ಆಶಾ, ಲತಾ, ಶಂಕುತಲಾ, ಶೋಭಾ, ಶೀಲಾ, ಸುಶೀಲಾ, ಸುನೀತಾ, ಟಿ. ಯಶೋಧ, ಮಂಜಮ್ಮ, ಪುಷ್ಪಾ ಮತ್ತಿತರರು ಉಪಸ್ಥಿತರಿದ್ದರು.

## ಪುರುಷರ ಆತ್ಮಹತ್ಯೆ : ಮಾರ್ಗಸೂಚಿಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ, ಜು. 3 – ಗೃಹ ಹಿಂಸಾಚಾರಕ್ಕೆ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುವ ಪುರುಷರ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ರೂಪಿಸಬೇಕು ಹಾಗೂ ಪುರುಷರ ಹಿತ ರಕ್ಷಿಸಲು ಪುರುಷರ ರಾಷ್ಟ್ರೀಯ ಆಯೋಗ ರಚಿಸಬೇಕು ಎಂಬ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಹಾಗೂ ದೀಪಂಕರ್ ದತ್ತ ಅವರನ್ನು ಒಳಗೊಂಡ ಪೀಠ ಈ ಅರ್ಜಿಯ ವಿಚಾರಣೆಗೆ ಒಲವು ತೋರಿಲ್ಲ. ಅರ್ಜಿದಾರರು ಕೇವಲ ಒಂದು ದೃಷ್ಟಿಕೋನ ಮಾತ್ರ ಬಿಂಬಿಸುತ್ತಿದ್ದಾರೆ. ಮದುವೆಯ ನಂತರ ಸಾವನ್ನಪ್ಪುವ ಯುವತಿಯರ ಮಾಹಿತಿ ನೀಡಬಲ್ಲಿರಾ? ಯಾರೂ ಆತ್ಮಹತ್ಯೆ ಮಾಡಿಕೊಳ್ಳಲು ಬಯಸುವುದಿಲ್ಲ, ಇದು ವ್ಯಕ್ತಿಗತ ಅಂಶಗಳನ್ನು ಅವಲಂಬಿಸಿರುತ್ತದೆ ಎಂದು ಪೀಠ ಹೇಳಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ದಳ 2021ರಲ್ಲಿ ಪ್ರಕಟಿಸಿದ ಮಾಹಿತಿಯ ಪ್ರಕಾರ ವಿವಾಹಿತ 81,063 ಪುರುಷರು ಆತ್ಮಹತ್ಯೆ ಮಾಡಿಕೊಂಡಿದ್ದರೆ, ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡ ಸಂಖ್ಯೆ 28,680 ಆಗಿದೆ. ಈ ವಿಷಯ ಪ್ರಸ್ತಾಪಿಸಿ ವಕೀಲ ಮಹೇಶ್ ಕುಮಾರ್ ತಿವಾರಿ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

## ಕೇಂದ್ರ ಸರ್ಕಾರ ಮೇಕೆದಾಟಿಗೆ ಅನುಮತಿ ನೀಡಿಲ್ಲ : ಬಿಜೆಪಿ

ಚೆನ್ನೈ, ಜೂ. 3 – ಕರ್ನಾಟಕದಲ್ಲಿ ಬಸವರಾಜ ಬೊಮ್ಮಾಯಿ ಸರ್ಕಾರ ಇದ್ದಾಗ ಕೇಂದ್ರ ಸರ್ಕಾರ ಮೇಕೆದಾಟು ಯೋಜನೆಗೆ ಅನುಮತಿ ನೀಡಿತ್ತು ಎಂಬ ಕಾಂಗ್ರೆಸ್ ಆರೋಪವನ್ನು ಬಿಜೆಪಿ ತಳ್ಳಿ ಹಾಕಿದ್ದು, ಯೋಜನೆಗೆ ಅನುಮತಿ ನೀಡಿಲ್ಲ ಎಂದು ಹೇಳಿದೆ.

ತಮಿಳುನಾಡು ಜೊತೆ ಚರ್ಚಿಸದೇ ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿತ್ತು ಎಂದು ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಕೆ.ಎಸ್. ಅಳಗಿರಿ ಹೇಳಿದ್ದರು.

ಈ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ ರಾಜ್ಯ ಉಪಾಧ್ಯಕ್ಷ ನಾರಾಯಣನ್ ತಿರುಪತಿ, ಕೇಂದ್ರ ಸರ್ಕಾರ ಮೇಕೆದಾಟು ಯೋಜನೆಗೆ ಅನುಮತಿ ನೀಡಿಲ್ಲ.

ರಾಜ್ಯ ಸರ್ಕಾರ ಸಲ್ಲಿಸಿದ್ದ ವಿಸ್ತೃತ ಯೋಜನಾ ವರದಿಯನ್ನು ತಳ್ಳಿ ಹಾಕಲಾಗಿದೆ ಎಂದಿದ್ದಾರೆ.

## ಬಾಲಸೋರ್ ಅಪಘಾತ : 52 ಮೃತರ ಗುರುತು ಇನ್ನೂ ಪತ್ತೆಯಿಲ್ಲ

ಭುವನೇಶ್ವರ, ಜು. 3 – ಬಾಲಸೋರ್ ತ್ರಿವಳಿ ರೈಲು ಅಪಘಾತದಲ್ಲಿ ಸಾವನ್ನಪ್ಪಿದ 52 ಜನರ ಗುರುತು ಇನ್ನೂ ಪತ್ತೆ ಮಾಡಲು ಸಾಧ್ಯವಾಗಿಲ್ಲ. ಅಪಘಾತದಲ್ಲಿ ಸಾವನ್ನಪ್ಪಿದ 81 ಮೃತದೇಹಗಳನ್ನು ಭುವನೇಶ್ವರದ ಎ.ಐ.ಐ.ಎಂ.ಎಸ್.ನಲ್ಲಿ ಇರಿಸಲಾಗಿತ್ತು. ಈ ಪೈಕಿ 29 ಮೃತದೇಹಗಳ ಗುರುತು ಮಾತ್ರ ಪತ್ತೆ ಮಾಡಲು ಸಾಧ್ಯವಾಗಿದೆ.

ಜೂನ್ 2ರಂದು ಸಂಭವಿಸಿದ ರೈಲು ಅಪಘಾತದಲ್ಲಿ 293 ಜನ ಸಾವನ್ನಪ್ಪಿದ್ದರು. 287 ಜನ ಸ್ಥಳದಲ್ಲೇ ಸಾವನ್ನಪ್ಪಿದ್ದರೆ, 6 ಜನರು ಗಾಯಗಳಿಂದಾಗಿ ಮೃತಪಟ್ಟಿದ್ದರು. 52 ಮೃತದೇಹಗಳ ಡಿ.ಎನ್.ಎ. ಪರೀಕ್ಷೆ ನಡೆಸಲಾಗಿದೆ. ಈ ಕುರಿತ ಮಾಹಿತಿ ಎರಡು, ಮೂರು ದಿನಗಳಲ್ಲೇ ಲಭ್ಯವಾಗುವ ನಿರೀಕ್ಷೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಮರಳಿನ ಗುಂಡಿಗೆ ಬಿದ್ದು ಯುವಕನ ಸಾವು

**ನ್ಯಾಮತಿ**

ನ್ಯಾಮತಿ,ಜು.3- ತಾಲ್ಲೂಕಿನ ಮರಿಗೊಂಡನಹಳ್ಳಿ ಗ್ರಾಮದ ಬಳಿ ಇರುವ ಅಚ್ಯುತಾಪುರ ಮರಳಿನ ಕ್ವಾರಿಯ ಗುಂಡಿಯ ನೀರಿನಲ್ಲಿ ಮುಳಗಿ ಯುವಕನೋರ್ವ ಮೃತಪಟ್ಟಿರುವ ಘಟನೆ ನಡೆದಿದೆ.

ಮೃತ ವ್ಯಕ್ತಿ ರಾಣೇಬೆನ್ನೂರು ತಾಲ್ಲೂಕಿನ ಜೋಯಿಸರ ಹರಳಹಳ್ಳಿಯ ಗ್ರಾಮದ ಬೀರಪ್ಪ ರಾಮಪ್ಪ ಬಿಲ್ಲಾರ್ (18) ಎಂದು ತಿಳಿದು ಬಂದಿದೆ. ಕುರಿಗಳನ್ನು ಮೇಯಿಸಲು ಹೋದ ಸಂದರ್ಭದಲ್ಲಿ ಸ್ನಾನ ಮಾಡಲೆಂದು ನೀರಿಗೆ ಇಳಿದಾಗ ಈ ಆಕಸ್ಮಿಕ ಸಂಭವಿಸಿರಬಹುದು ಎನ್ನಲಾಗಿದೆ.

# 'ಮನೆ ಮನೆಗೆ ಗಂಗೆ' ಯೋಜನೆ ಸಂಪೂರ್ಣ ಅವೈಜ್ಞಾನಿಕ

### ರಾಣೇಬೆನ್ನೂರು : ರೈತ ಮುಖಂಡ, ತಾ.ಪಂ. ಮಾಜಿ ಅಧ್ಯಕ್ಷ ರವೀಂದ್ರಗೌಡ ಎಫ್. ಪಾಟೀಲ್ ಆರೋಪ



ರಾಣೇಬೆನ್ನೂರು, ಜು.3- ದೇಶಾದ್ಯಂತ ಗ್ರಾಮೀಣ ಭಾಗಗಳಲ್ಲಿ ಪ್ರತಿ ಮನೆ ಮನೆಗೆ ಶುದ್ಧ ಕುಡಿಯುವ ನೀರು ಪೂರೈಸಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ಜಲ ಜೀವನ ಮಿಷನ್' (ಹರ್ ಘರ್ ಜಲ್) ಮನೆ ಮನೆಗೆ ಗಂಗೆ ಯೋಜನೆ ಸಂಪೂರ್ಣ ಅವೈಜ್ಞಾನಿಕ ಯೋಜನೆಯಾಗಿದೆ ಎಂದು ರೈತ ಮುಖಂಡ, ತಾ.ಪಂ. ಮಾಜಿ ಅಧ್ಯಕ್ಷ ರವೀಂದ್ರಗೌಡ ಎಫ್. ಪಾಟೀಲ್ ಗಂಭೀರ ಆರೋಪ ಮಾಡಿದರು.

ಮುಷ್ಟೂರಿನಲ್ಲಿ ನಡೆದ ಗ್ರಾಮೀಣ ನೀರು ಸರಬರಾಜು ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಅನೇಕ ವರ್ಷಗಳ ಪ್ರಯತ್ನದ ಫಲವಾಗಿ ಗ್ರಾಮೀಣ ಭಾಗದ ಜನರ ಬಹು ದಿನಗಳ ಕನಸಿನ ಗುಣಮಟ್ಟದ ಸಿ.ಸಿ. ಮತ್ತು ಡಾಂಬರ್ ರಸ್ತೆಗಳು ಈ ಯೋಜನೆಯ ಪೈಪ್‌ಲೈನ್ ಹಾಕುವ ನೆಪದಿಂದ ಜೆ.ಸಿ.ಬಿ. ಯಂತ್ರಗಳಿಂದ ಕಿತ್ತು ಹೋಗಿವೆ.

ಒಂದು ಬಾರಿ ರಸ್ತೆ ಮಂಜೂರು ಮಾಡಿಸಿಕೊಳ್ಳುವುದೇ ದುಸ್ತರ. ಅಂಥದ್ದರಲ್ಲಿ ಇತ್ತೀಚೆಗೆ ನಿರ್ಮಾಣವಾಗಿರುವ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಲ್ಲಿ ಎಸ್ಸಿ, ಎಸ್ಟಿ ಜನಾಂಗದವರು ವಾಸಿಸುವ ಓಣಿಯು ಸೇರಿದಂತೆ ಇತರೆ ಜನಾಂದವರು ವಾಸಿಸುವ ಪ್ರದೇಶಗಳಲ್ಲಿ ನಿರ್ಮಾಣವಾಗಿದ್ದ ವಿಶೇಷ ಯೋಜನೆಯ ರಸ್ತೆಗಳೆಲ್ಲಾ ಈ ಪೈಪ್‌ಲೈನ್‌ನಿಂದ ಕಿತ್ತು ಹೋಗಿವೆ ಎಂದರು.

ಆಯಾ ರಾಜ್ಯ ಸರ್ಕಾರಗಳು ಎನ್‌ಆರ್‌ಇಜಿ ಶಾಸಕರ, ಸಂಸದರ ಪ್ರದೇಶಾಭಿವೃದ್ಧಿಯಂಥ ವಿವಿಧ ಯೋಜನೆಗಳಲ್ಲಿ ನಿರ್ಮಾಣವಾಗಿದ್ದ ರಸ್ತೆಗಳನ್ನೆಲ್ಲಾ ಯಂತ್ರಗಳಿಂದ ಕೆಡಿಸಿ ಜನರು ಮತ್ತು ವಾಹನಗಳು ಓಡಾಡದಂತಹ ಪರಿಸ್ಥಿತಿ ನಿರ್ಮಾಣವಾಗಿರುವುದಕ್ಕೆ ಯೋಜನೆಯ ಅವೈಜ್ಞಾನಿಕ ನೀತಿ ಮತ್ತು ಯೋಜನೆಯಲ್ಲಿ ನಡೆದಿರುವ ಭ್ರಷ್ಟಚಾರ ಕಾರಣವಾಗಿದೆ ಎಂದು ಹೇಳಿದರು.

ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಮೋದಿ ನೇತೃತ್ವದ 2 ನೇ ಅವಧಿಯ ಕೇಂದ್ರ ಸರ್ಕಾರ ದೇಶದ ಗ್ರಾಮೀಣ ಭಾಗಗಳಲ್ಲಿ ಜಾರಿಗೆ ತಂದು, ವ್ಯಾಪಕ ಭ್ರಷ್ಟಾಚಾರ ನಡೆಸಿದ ಯೋಜನೆ ಇದಾಗಿದ್ದು, ಯೋಜನೆಯ ಸಮಗ್ರ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.


ರಸ್ತೆ ಪುನರ್ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರಕ್ಕೆ ಆರ್ಥಿಕ ಹೊರೆ ಮಾಡಿದ ಬ್ರಹ್ಮಾಂಡ ಭ್ರಷ್ಟಾಚಾರದ ಯೋಜನೆಯಾಗಿದೆ ಎಂದು ಕೇಂದ್ರ ಸರ್ಕಾರ ಈ ಯೋಜನೆ ಜಾರಿಗೆ ತರುವ ಮುನ್ನ ಯೋಜನೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿತ್ತು ಎಂದು ಹೇಳಿದರು.

ಕುಡಿಯುವ ನೀರಿನ ಯೋಜನೆಯಲ್ಲಿದ್ದ ಹಳೆಯ ನೀರಿನ ಟ್ಯಾಂಕರ್‌ಗಳಿಗೆ 'ನೀಲಿ' ಬಣ್ಣ ಹಚ್ಚಿ '30' ವರ್ಷಗಳ ತನಕ ಸಮಿತಿಯವರು ಈ ಟ್ಯಾಂಕರನ್ನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕೆನ್ನುವ ಯೋಜನೆಯ ನಿಯಮ 'ಹಳೇ ಮುದುಕಿಗೆ ಹೊಸ ಸೀರೆ ಉಡಿಸಿದಂತಾಗಿದೆ' ಎಂದು ವ್ಯಂಗ್ಯವಾಡಿದರು.

ಈ ಯೋಜನೆಯಿಂದ ಗ್ರಾಮೀಣ ಭಾಗದ ಕೆಲವು ಸ್ಥಳಾಂತರ ಪ್ರದೇಶಗಳಲ್ಲಿ ರಾಜ್ಯ ಸರ್ಕಾರಗಳು ಈ ಮೊದಲು ಜಾರಿಗೆ ತಂದಿದ್ದ ವಿಶೇಷ ಕುಡಿಯುವ ನೀರಿನ ಯೋಜನೆಗಳಿಗೆ ಶಾಶ್ವತವಾಗಿ ಎಳ್ಳು ನೀರು ಬಿಡಲಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಸೆಂಟ್ರಲ್ ಕಮಿಟಿಯ ಸಂಜಯ್ ಶುಕ್ಲಾ, ಸಿಬ್ಬಂದಿಗಳಾದ ಬಸವರಾಜ್, ಹೊನ್ನಪ್ಪ ಮಾಳಪ್ಪನವರ, ಗ್ರಾ. ಪಂ. ಪಿ.ಡಿ.ಓ ಮತ್ತು ಶಾಲಾ ಸಿಬ್ಬಂದಿ ಮತ್ತು ಸಮಿತಿಯವರು, ನಾಗರಿಕರು ಉಪಸ್ಥಿತರಿದ್ದರು.


## 15ನೇ ವರ್ಷದ ಪುಣ್ಯಸ್ಮರಣೆ



**ದಿ. ಕೆ. ಕೊಟ್ರಬಸಪ್ಪ**

**(ದಾವಣಗೆರೆ ಅರ್ಬನ್ ಬ್ಯಾಂಕ್ ನಿವೃತ್ತ ನೌಕರರು)**

ನೀವು ನಮ್ಮನ್ನಗಲಿ ಇಂದಿಗೆ 15 ವರ್ಷಗಳಾದವು.
ನಿಮ್ಮ ನೆನಪು ಸದಾ ನಮ್ಮ ಹೃದಯದಲ್ಲಿ ಅಚ್ಚಳಿಯದೇ ಉಳಿದಿದೆ.
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಸದಾ ಸ್ಮರಿಸುತ್ತಿರುವ

**ಪತ್ನಿ : ಕೆ. ರತ್ನಮ್ಮ ಮತ್ತು ಮಕ್ಕಳು, ಅಕ್ಕಂದಿರು, ತಮ್ಮಂದಿರು, ಅಳಿಯಂದಿರು, ಸೊಸೆಯಂದಿರು**

**ಕುಟುಂಬ ವರ್ಗ ಹಾಗೂ ಬಂಧು - ಮಿತ್ರರು**


### ಮಡಿವಾಳರ ತಿಪ್ಪಮ್ಮ ನಿಧನ



ದಾವಣಗೆರೆಯ ಚೌಕಿಪೇಟೆ ಹೊಸ ಪಿಂಜಾರಗಲ್ಲಿ ಜಯದೇವ ಪ್ರೆಸ್ ಹಿಂಭಾಗದ ವಾಸಿ ದಿ. ಮಡಿವಾಳರ ಕೆಂಚಪ್ಪ ಇವರ ಪತ್ನಿ ತಿಪ್ಪಮ್ಮ (77) ಇವರು ದಿನಾಂಕ : 03-07-2023 ರ ಸೋಮವಾರ ರಾತ್ರಿ 9 ಗಂಟೆಗೆ ನಿಧನರಾದರು. ಗಂಡು ಮಕ್ಕಳು, ಹೆಣ್ಣು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 04-07-2023ರ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಸಾರ್ವಜನಿಕ ರುದ್ರ ಭೂಮಿಯಲ್ಲಿ ನೆರವೇರಿಸಲಾಗುವುದು.

## ಸರ್ಕಾರಿ ಬಸ್ ಸೌಕರ್ಯಕ್ಕಾಗಿ ಆಗ್ರಹಿಸಿ ರೈತ ಸಂಘಟನೆ ಪ್ರತಿಭಟನೆ




ಜಗಳೂರು,ಜು.3- ಹಳ್ಳಿಗಳಿಗೆ ಸರ್ಕಾರಿ ಬಸ್ ಸೌಕರ್ಯಕ್ಕಾಗಿ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ್) ಬಣದ ರೈತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಬೈಕ್ ರ್‍ಯಾಲಿಯೊಂದಿಗೆ ಹೊರಟ ಪ್ರತಿಭಟನಾಕಾರರು, ಮಹಾತ್ಮಗಾಂಧಿ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ತಹಶೀಲ್ದಾರ್ ಕಛೇರಿಗೆ ತೆರಳಿ ಲಿಖಿತ ಮನವಿ ಸಲ್ಲಿಸಿದರು.

ಸಂಘದ ತಾಲ್ಲೂಕು ಗೌರವಾಧ್ಯಕ್ಷ ಗಂಗಾಧರಪ್ಪ ಮಾತನಾಡಿ, ಸ್ವಾತಂತ್ರ್ಯ ದೊರೆತು 7 ದಶಕಗಳು ಕಳೆದರೂ ತಾಲ್ಲೂಕಿನ ಬಹುತೇಕ ಗ್ರಾಮಗಳಿಗೆ ಸಾರಿಗೆ ವ್ಯವಸ್ಥೆ ಕಾಣದೆ 2ಕೀ.ಮೀ ರಸ್ತೆಯಲ್ಲಿ ಕಾಲ್ನಡಿಗೆಯಿಂದ ಆಗಮಿಸಿ ಬಸ್‌ಗಳಲ್ಲಿ ಸಂಚರಿಸುವ ಅನಿವಾರ್ಯತೆ ಎದುರಾಗಿದೆ.ಇದರಿಂದ ಕಾಲೇಜು ವಿದ್ಯಾರ್ಥಿಗಳು, ವಯೋವೃದ್ದರು, ಮಹಿಳೆಯರು ಬಳಲಿ ಬಸವಳಿದು ಹೋಗಿದ್ದಾರೆ. ಈ ಬಗ್ಗೆ ಸರಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಗಮನಹರಿಸಿಲ್ಲ ಎಂದು ಆರೋಪಿಸಿದರು.

ಸಂಘದ ಜಿಲ್ಲಾ ಕಾರ್ಯದರ್ಶಿ ಸತೀಶ್ ಮಾತನಾಡಿ, ತಾಲ್ಲೂಕಿನ ಕಣ್ವಕುಪ್ಪೆ, ಕೆಳಗೋಟೆ, ಚಿಕ್ಕಬನ್ನಿಹಟ್ಟಿ, ಗ್ರಾಮಗಳು ಕೊಂಡ

**ಜಗಳೂರು**

ಕುರಿ ಅರಣ್ಯ ಪ್ರದೇಶದ ಅಂಚಿನಲ್ಲಿದ್ದು, ಸಾರಿಗೆ ವ್ಯವಸ್ಥೆಯಿಲ್ಲ. ಮತ್ತೊಂದೆಡೆ ಕಾಲ್ನಡಿಗೆ ಮೂಲಕ ಸಂಚರಿಸಲು ಕರಡಿ, ಇತರೆ ಕಾಡು ಪ್ರಾಣಿಗಳ ಹಾವಳಿಯಿಂದ ಭಯದ ವಾತಾವರಣದಲ್ಲಿ ಜನರು ಸಂಚರಿಸಬೇಕಿದೆ. ಕೂಡಲೇ ತಾಲ್ಲೂಕಿನಲ್ಲಿ ಅಗತ್ಯವಿರುವ ಪ್ರತಿ ಹಳ್ಳಿಗಳಿಗೆ ಗ್ರಾಮೀಣ ಸಾರಿಗೆ ವ್ಯವಸ್ಥೆ ಕಲ್ಪಿಸದಿದ್ದರೆ ಉಗ್ರ ಸ್ವರೂಪದ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿರಂಜೀವಿ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ರಾಜು, ಮುಖಂಡರಾದ ಶರಣಪ್ಪ, ನಾಗರಾಜ್, ಅಂಜಿನಪ್ಪ, ಪಾಪಣ್ಣ, ಮಂಜಣ್ಣ, ಪ್ರಹ್ಲಾದಪ್ಪ, ರಂಗಪ್ಪ ಸೇರಿದಂತೆ ಭಾಗವಹಿಸಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಭತ್ತದ ಬೆಳೆ ಹಾನಿ ವರದಿ ವಿಳಂಬಕ್ಕೆ ಆಕ್ರೋಶ

## ಹರಿಹರ ತಾಲ್ಲೂಕು ಕೃಷಿ ಇಲಾಖೆ ಕಚೇರಿ ಬಾಗಿಲು ಹಾಕಿ ರೈತರ ಪ್ರತಿಭಟನೆ



ಹರಿಹರ, ಜು. 3 – ಭತ್ತದ ಬೆಳೆಗೆ ಹವಾಮಾನ ವೈಪರೀತ್ಯದಿಂದ ಆಗಿರುವ ಹಾನಿಗೆ ಪರಿಹಾರ ನೀಡುವ ಕುರಿತು, ತಾಲ್ಲೂಕು ಕೃಷಿ ಇಲಾಖೆ ಅಧಿಕಾರಿಗಳು ವರದಿ ಸಲ್ಲಿಸುವುದನ್ನು ವಿಳಂಬ ಮಾಡಿದ್ದಾರೆ ಎಂದು ಹೇಳಿರುವ ರೈತರು, ಕೃಷಿ ಇಲಾಖೆಯ ಕಚೇರಿ ಬಾಗಿಲು ಹಾಕಿ ಪ್ರತಿಭಟನೆ ನಡೆಸಿದ್ದಾರೆ.

ತಾಲ್ಲೂಕಿನ ಕಸಬಾ ಮತ್ತು ಮಲೇಬೆನ್ನೂರು, ನಂದಿತಾವರೆ, ಯಕ್ಕೆಗೊಂದಿ, ಕುಣೆಬೆಳಕೇರೆ, ಹಲಸಬಾಳು, ದೀಟೂರು, ಕೊಕ್ಕನೂರು, ಪಾಳ್ಯ, ಕೊಂಡಜ್ಜಿ, ಚಿಕ್ಕಬಿದರಿ, ದೇವರ ಬೆಳಕೇರೆ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ಭತ್ತದ ಬೆಳೆಗೆ ತೀವ್ರ ಹಾನಿಯಾಗಿದೆ ಎಂದು ರೈತರು ಈ ಸಂದರ್ಭದಲ್ಲಿ ತಿಳಿಸಿದರು.

ಕಳೆದ ಜೂ.16ರಂದು ಯಕ್ಕೆಗೊಂದಿ ಗ್ರಾಮದ ಬಳಿ ಪ್ರತಿಭಟನೆ ನಡೆಸಿದಾಗ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು. ಹಾನಿ ಪರಿಹಾರದ ವರದಿಯನ್ನು ಸರ್ಕಾರಕ್ಕೆ ಕಳಿಸುವುದಾಗಿ ತಿಳಿಸಿದ್ದರು. ಆದರೆ, ಇದುವರೆಗೂ ತಾಲ್ಲೂಕಿನ ಅಧಿಕಾರಿಗಳು ವರದಿ ನೀಡಿಲ್ಲ. ತಜ್ಞರು ಸ್ಥಳಕ್ಕೆ ಭೇಟಿ ನೀಡಬೇಕು ಎಂದು ಕಾರಣ ನೀಡುತ್ತಿದ್ದಾರೆ ಎಂದು ರೈತ ಮುಖಂಡರಾದ ಪರಮೇಶ್ವರಪ್ಪ ಭಾನುವಳ್ಳಿ ಮತ್ತು ಶಂಭುಲಿಂಗಪ್ಪ ನಂದಿತಾವರೆ, ಎನ್.ಪಿ. ಶಿವಕುಮಾರ್, ಹಾಳೂರು ನಾಗರಾಜ್ ಹೇಳಿದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ನಾಗನಗೌಡ್ರು ಮಾತನಾಡಿ, ಒಂದು ಹಂತದಲ್ಲಿ ಪರಿಶೀಲನೆ ಪೂರೈಸಲಾಗಿದೆ. ಶಿವಮೊಗ್ಗದಿಂದ ತಜ್ಞರ ತಂಡ ಆಗಮಿಸಿ ವರದಿ ನೀಡಬೇಕಿದೆ. ಎರಡು, ಮೂರು ದಿನಗಳಲ್ಲಿ ಅವರು ಬರುವ ನಿರೀಕ್ಷೆ ಇದೆ ಎಂದರು.

ತಹಶೀಲ್ದಾರ್ ಪೃಥ್ವಿ ಸಾನಿಕಂ ಮಾತನಾಡಿ ಕೃಷಿ ಇಲಾಖೆಯ ನಿರ್ದೇಶಕ ನಾಗನಗೌಡ್ರು ರವರು ಹಿರಿಯ ಅಧಿಕಾರಿಗಳ ನಿರ್ದೇಶನ ಏನು ಬಂದಿದೆ ಅದನ್ನು ಪಾಲಿಸಬೇಕಾಗುತ್ತದೆ. ಅವರು ಸರ್ವೆ ಮಾಡಿದ್ದಾರೆ. ಆದರೆ ವಿಜ್ಞಾನಿಗಳು ಬರುವುದು ತಡವಾಗಿದ್ದರಿಂದ ಇಷ್ಟೆಲ್ಲ ರಾದ್ಧಾಂತಕ್ಕೆ ಕಾರಣವಾಗಿದೆ. ಈ ಕೂಡಲೇ ವಿಜ್ಞಾನಿಗಳ ಜೊತೆಗೆ ನಾನು ಕೂಡ ಮಾತನಾಡಿ, ಆದಷ್ಟು ಬೇಗ ವರದಿಯನ್ನು ಸಿದ್ದ ಮಾಡಿ ಕಳಿಸಿಕೊಡುವುದಕ್ಕೆ ಮುಂದಾಗುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಶಶಿಧರಯ್ಯ, ಶಂಭುಲಿಂಗಪ್ಪ ನಂದಿತಾವರೆ, ಬಸವರಾಜಪ್ಪ ಹಲಸಬಾಳು, ಹಾಳೂರು ನಾಗರಾಜ್, ಪರಮೇಶ್ವರಪ್ಪ ಕೆಂಚನಹಳ್ಳಿ, ರುದ್ರಮುನಿ ಹನಗವಾಡಿ, ಎನ್.ಪಿ.ಶಿವು, ಪರಮೇಶ್ವರಪ್ಪ ಕೆಂಚನಹಳ್ಳಿ, ತಿಪ್ಪೇಸ್ವಾಮಿ, ಗದಿಗೆಪ್ಪ, ರಾಜಪ್ಪ, ಪ್ರಕಾಶ್ ಕೊಂಡಜ್ಜಿ, ಬಸವರಾಜ್, ನಂದೀಶ್ , ವಿ.ಎ ಹೇಮಂತ್, ಮತ್ತಿತರರು ಉಪಸ್ಥಿತರಿದ್ದರು.

# ಸರ್ಕಾರ ಆರ್ಥಿಕತೆಯನ್ನು ಐ.ಸಿ.ಯು.ನಲ್ಲಿ ಮಲಗಿಸಲಿದೆ



ಬೆಂಗಳೂರು, ಜು. 3 - ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿನ ರಾಜ್ಯಪಾಲರ ಭಾಷಣವನ್ನು ಗಮನಿಸಿದರೆ, ಈ ಸರ್ಕಾರವು ಆದಷ್ಟು ಬೇಗ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಐ.ಸಿ.ಯು.ನಲ್ಲಿ ಮಲಗಿಸಲಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಆತಂಕ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಪಾಲರ ಭಾಷಣವು ರಾಜ್ಯದ ಮುಂದಿನ ದುರ್ಬರ ದಿನಗಳತ್ತ ಬೊಟ್ಟು ಮಾಡಿದೆ. ಈ ಸರ್ಕಾರ ಐಸಿಯುಗೆ ಹೋಗುವ ಕಾಲವೂ ಶೀಘ್ರವೇ ಬರಲಿದೆ ಎಂದು ಅನಿಸುತ್ತಿದೆ. ಐಸಿಯು, ವೆಂಟಿಲೇಟರ್ ಮೇಲೆ ಈ ಸರ್ಕಾರ ನಡೆಯುವ ಸನ್ನಿವೇಶ ನಿರ್ಮಾಣ ಆಗಬಹುದು ಎಂದರು.

ಅಲ್ಲದೆ, ಸಮ್ಮಿಶ್ರ ಸರ್ಕಾರದಂತೆ ಆಗಿರುವ ಈ ಸರ್ಕಾರವೂ ಐಸಿಯು ಪಾಲಾಗುವ ಕಾಲ ಹತ್ತಿರದಲ್ಲೇ ಇದೆ ಎಂದು ಅವರು ಭವಿಷ್ಯ ನುಡಿದರು.

ಈ ಸರ್ಕಾರಕ್ಕೆ ಮುಂದಿನ ಐದು ವರ್ಷಕ್ಕೆ ಏನು ಕೊಡಬೇಕೆಂಬ ದೂರದೃಷ್ಟಿ, ಆತ್ಮವಿಶ್ವಾಸವೇ ಇಲ್ಲ. ರಾಜ್ಯಪಾಲರ ಭಾಷಣ ಇರಲಿ, ಬಜೆಟ್ ಭಾಷಣ ಇರಲಿ, ಸರಕಾರದ ಮುಂದಿನ ಆಶಯಗಳ ಬಗ್ಗೆ ಬೆಳಕು ಚೆಲ್ಲಬೇಕು. ಈ ಭಾಷಣದಲ್ಲಿ ಬೆಳಕಿನ ಮಾತು ಹಾಗಿರಲಿ, ಬರೀ ಕತ್ತಲೆ ತುಂಬಿದೆ ಎಂದರು.

135 ಸೀಟುಗಳನ್ನು ಗೆದ್ದ ಪೂರ್ಣ ಬಹುಮತದ ಸರ್ಕಾರದ ರಾಜ್ಯಪಾಲರ ಭಾಷಣ ಎಂದರೆ ಅದಕ್ಕೊಂದು ಗಾಂಭೀರ್ಯ ಬೇಡವೇ ಎಂದ ಅವರು, ಆಡಳಿತ ಪಕ್ಷದ ಯಾವ ಶಾಸಕರು ಕೂಡ ರಾಜ್ಯಪಾಲರ ಭಾಷಣ ಕೇಳಿ ಮೇಜು ಕುಟ್ಟಿದ್ದು ನೋಡಲಿಲ್ಲ ಎಂದು ಟಾಂಗ್ ನೀಡಿದರು.

# ಭ್ರಷ್ಟಾಚಾರ ನಿವಾರಣೆಗೆ ಕಾನೂನು ಜಾರಿ

**(1ನೇ ಪುಟದಿಂದ)** ನಿರುದ್ಯೋಗಿಗಳಿಗೆ ಮಾಸಿಕ 2000 ರೂ.ಭತ್ಯೆ, ಸರ್ಕಾರಿ ಸಾರಿಗೆ ಸಂಸ್ಥೆಗಳ ಬಸ್ಸಿನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಶಕ್ತಿ ಯೋಜನೆ ಅನುಷ್ಠಾನಗೊಳಿಸುವ ಮೂಲಕ ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರ ಕಡಿಮೆ ಮಾಡಲು ಸರ್ಕಾರ ಈ ಮಹತ್ತರ ಯೋಜನೆ ಹಮ್ಮಿಕೊಂಡಿದೆ ಎಂದರು.

ಜನರಿಂದಲೇ ಸೃಷ್ಟಿಯಾದ ಸಂಪತ್ತಿನಲ್ಲಿ ಒಂದು ಪಾಲನ್ನು ಕೊಡುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ ಎಂದು ರಾಜ್ಯಪಾಲರು ಬಲವಾಗಿ ಸಮರ್ಥಿಸಿಕೊಂಡರು.

ಹೊಸ ಸರ್ಕಾರವೊಂದನ್ನು ಆರಿಸುವಾಗ ಜನರ ನಿರೀಕ್ಷೆಗಳು ಹೊಸತಾಗಿರುತ್ತವೆ. ಹಳೆಯದಕ್ಕಿಂತ ಭಿನ್ನವಾದ ಮತ್ತು ಆಶೋತ್ತರಗಳನ್ನು ಪ್ರತಿಬಿಂಬಿಸುವ ಆಡಳಿತವನ್ನು ಅವರು ನಿರೀಕ್ಷಿಸಿರುತ್ತಾರೆ. ಕಳೆದ 34 ವರ್ಷಗಳಲ್ಲಿ ಯಾರಿಗೂ ನೀಡದ ಬಹುಮತದೊಂದಿಗೆ ಈ ಸರ್ಕಾರವನ್ನು ಜನರು ಆಯ್ಕೆ ಮಾಡಿದ್ದಾರೆ.

ಅವರ ನಿರೀಕ್ಷೆಯನ್ನು ಹುಸಿಗೊಳಿಸುವುದಿಲ್ಲ. ಅದಕ್ಕಾಗಿ ನಾವು ಜನಕಲ್ಯಾಣ ಮತ್ತು ಆರ್ಥಿಕ ಸ್ಥಿತಿ ಎರಡನ್ನೂ ಸಮತೂಕದಲ್ಲಿ ನಿಭಾಯಿಸಿ ಕರ್ನಾಟಕದ್ದೇ ಆದ ಹೊಸ ಆಡಳಿತ ಮಾದರಿಯೊಂದನ್ನು ನನ್ನ ಸರ್ಕಾರ ರಾಷ್ಟ್ರಕ್ಕೆ ಪರಿಚಯಿಸಲಿದೆ ಎಂದು ರಾಜ್ಯಪಾಲರು ತಿಳಿಸಿದರು.

2013ರಿಂದ ಐದು ವರ್ಷಗಳ ಅಂದಿನ ಆಡಳಿತದಲ್ಲಿ ಕೈಗೊಂಡಿರುವ ಕೆಲವು ಯೋಜನೆಗಳನ್ನು ಈ ಸರ್ಕಾರ ಮತ್ತೆ ಮುಂದುವರೆಸಲಿದೆ.

ಬಾಕಿ ಉಳಿದಿರುವ ಎಲ್ಲಾ ನೀರಾವರಿ ಯೋಜನೆಗಳನ್ನು 5 ವರ್ಷಗಳ ಪೂರ್ಣಗೊಳಿಸುವ ಭರವಸೆಯನ್ನು ರಾಜ್ಯಪಾಲರ ಮೂಲಕ ಸದನಕ್ಕೆ ನೀಡಿರುವ ಸರ್ಕಾರ, ಇನ್ನು ಮುಂದೆ ರೈತರ ಸಹಭಾಗಿತ್ವದಲ್ಲಿ ಕೆರೆ-ಕಟ್ಟೆಗಳನ್ನು ನಿರ್ಮಿಸುವ ಘೋಷಣೆ ಮಾಡಿದೆ.

ಪ್ರವಾಸೋದ್ಯಮಕ್ಕೆ ಉತ್ತೇಜನ ಕಲ್ಪಿಸಿ, 5 ಲಕ್ಷ ಉದ್ಯೋಗವನ್ನು ಇದರಡಿಯೇ ಸೃಷ್ಟಿಸಲಾಗುವುದು. ಅಲೆಮಾರಿ ಕುರಿಗಾರರ ಹಿತರಕ್ಷಣೆಗೆ ಪ್ರತ್ಯೇಕ ಕಾಯ್ದೆ ತರುವುದಾಗಿ ತಿಳಿಸಿದರು. ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರು ಒದಗಿಸಲು ಯೋಜನೆ ರೂಪಿಸಿ ನಮ್ಮ ಆಡಳಿತಾವಧಿಯಲ್ಲೇ ಪೂರ್ಣಗೊಳಿಸುವುದಾಗಿ ಹೇಳಿದರು.

# ಆರ್ಯ-ಈಡಿಗರ ಮಹಿಳಾ ಹಾಸ್ಟೆಲ್‌ಗೆ ಅರ್ಜಿ

ದಾವಣಗೆರೆ,ಜು.3- ಸ್ಥಳೀಯ ವಿನೋಬನಗರ ಪಿ.ಬಿ. ರಸ್ತೆಯಲ್ಲಿರುವ ಆರ್ಯ-ಈಡಿಗರ ಸಮಾಜದ ಮಹಿಳಾ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಆರ್ಯ - ಈಡಿಗರ ಸಂಘದ ಅಧ್ಯಕ್ಷ ಹೆಚ್. ಶಂಕರ್ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

2023-24ನೇ ಸಾಲಿನಲ್ಲಿ ಪಿಯುಸಿ, ಪದವಿ,ಇಂಜಿನಿಯರಿಂಗ್ ಪದವಿ, ಸ್ನಾತಕೋತ್ತರ ಪದವಿ ಅಭ್ಯಾಸ ಮಾಡುತ್ತಿರುವ ಆರ್ಯ-ಈಡಿಗರ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಆಸಕ್ತ ವಿದ್ಯಾರ್ಥಿನಿಲಯರು ನಾಳೆಯೊಳಗೆ ವಿದ್ಯಾರ್ಥಿ ನಿಲಯದಲ್ಲಿ ಅರ್ಜಿ ಪಡೆದು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಬಹುದು.

ವಿವರಕ್ಕೆ ದೂರವಾಣಿ 08192-254261 ಅಥವಾ ಮೊಬೈಲ್ ಸಂಖ್ಯೆ 88922-66468 ಅಥವಾ 98453-55008ರಲ್ಲಿ ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದು ಎಂದು ಸಂಘದ ಕಾರ್ಯದರ್ಶಿ ಎ. ನಾಗರಾಜ್ ತಿಳಿಸಿದ್ದಾರೆ.

# ಫ.ಗು. ಹಳಕಟ್ಟಿ ತ್ಯಾಗದಿಂದ ನಾಡಿಗೆ ವಚನ ಭಂಡಾರ

## ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಹಾಗೂ ಶ್ರೀ ಹಡಪದ ಅಪ್ಪಣ್ಣ ಜಯಂತಿಯಲ್ಲಿ ಜಿಲ್ಲಾಧಿಕಾರಿ ಕಾಪಶಿ



ದಾವಣಗೆರೆ, ಜು. 3 - ವಿಶ್ವ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿರುವ ಕನ್ನಡ ಸಾಹಿತ್ಯವನ್ನು ಸಂಗ್ರಹಿಸಿ, ಸಂರಕ್ಷಿಸಿ ಜನತೆಗೆ ಪರಿಚಯಿಸಿದ ಡಾ.ಫ.ಗು. ಹಳಕಟ್ಟಿಯವರ ತ್ಯಾಗ ಅವಿಸ್ಮರಣೀಯ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದರು.

ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಡಾ.ಫ.ಗು ಹಳಕಟ್ಟಿಯವರ ಜನ್ಮ ದಿನದ ಅಂಗವಾಗಿ ಏರ್ಪಡಿಸಲಾದ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಹಾಗೂ ಶ್ರೀ ಹಡಪದ ಅಪ್ಪಣ್ಣ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಜಿಲ್ಲಾ ಹಡಪದ ಅಪ್ಪಣ್ಣ ಸಮಾಜ ಇವರ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಹಳಕಟ್ಟಿಯವರು ತಮ್ಮ ಅಮೂಲ್ಯವಾದ ವಚನ ಬಂಡಾರವನ್ನು ಕನ್ನಡ ನಾಡಿಗೆ ನೀಡಿ ಉಪಕರಿಸಿದ್ದಾರೆ. 12ನೇ ಶತಮಾನದ ವಚನ ಗ್ರಂಥಗಳನ್ನು ಸಂಗ್ರಹಿಸಿ ಪ್ರಕಟಿಸದಿದ್ದರೆ, ವಚನ ಸಾಹಿತ್ಯದ ಸಾರವನ್ನು ತಿಳಿಯಲು ಸಾಧ್ಯವಾಗುತ್ತಿರಲಿಲ್ಲ ಎಂದು ಅವರು ಹೇಳಿದರು.

ಹಳಕಟ್ಟಿ ಅವರು ವೈಯಕ್ತಿಕ ಜೀವನದ ಆಸೆ, ಆಕಾಂಕ್ಷೆಗಳನ್ನು ತೊರೆದು ಸಾಮಾಜಿಕ ಹಿತಕ್ಕಾಗಿ ವಚನ ಸಾಹಿತ್ಯವನ್ನು ಉಳಿಸಿ ಬೆಳೆಸಿದರು. ಕನ್ನಡ ಸಾಹಿತ್ಯ ಸಮೃದ್ಧಿಯಲ್ಲಿ ವಚನಗಳು ತಮ್ಮದೇ ಆದ ಪ್ರಾಮುಖ್ಯತೆ ಪಡೆದಿವೆ ಎಂದರು.

ಹಡಪದ ಅಪ್ಪಣ್ಣನವರು ಜಾತಿ, ಧರ್ಮ, ವರ್ಣ ಹಾಗೂ ವರ್ಗರಹಿತ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ಇವರ ವಚನಗಳು ಬಸವಣ್ಣನವರ ಮೇಲಿನ ಗೌರವ, ಭಕ್ತಿಯನ್ನು ವ್ಯಕ್ತಪಡಿಸುತ್ತದೆ. ಬಸವಣ್ಣನವರು ಅಪ್ಪಣ್ಣನನ್ನು ಆಪ್ತ ಕಾರ್ಯದರ್ಶಿಯಾಗಿ ಮಾಡಿಕೊಂಡಿದ್ದರು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ ಮಾತನಾಡಿ, ಕನ್ನಡ ಸಾಹಿತ್ಯದಲ್ಲಿ ವಚನಗಳನ್ನು ಸಂಗ್ರಹಿಸಿದ ಕೀರ್ತಿ ಹಳಕಟ್ಟಿಯವರಿಗೆ ಸಲ್ಲುತ್ತದೆ. ಹಡಪದ ಅಪ್ಪಣ್ಣನವರು ತಮ್ಮ ವಚನ ಸಾಹಿತ್ಯದಲ್ಲಿ ಜೀವನದ ನೈತಿಕ ನೆಲೆಗಟ್ಟಿನ ವಿಚಾರಗಳನ್ನು ತಿಳಿಸಿದ್ದಾರೆ ಎಂದರು.

ಹೊನ್ನಾಳಿಯ ಅಭಿನಯತ್ರಿ ಕಲಾ ತಂಡದ ವತಿಯಿಂದ ನೃತ್ಯ ಪ್ರದರ್ಶಿಸಲಾಯಿತು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮಗೊಂಡ ಬಸರಗಿ, ಜಿಲ್ಲಾ ಪಂಚಾಯ್ತಿ ಉಪ ನಿರ್ದೇಶಕಿ ಶಾರದ, ದೂಡಾ ಆಯುಕ್ತ ಬಸವನಗೌಡ, ಜಿಲ್ಲಾ ಹಡಪದ ಅಪ್ಪಣ್ಣ ಸಮಾಜದ ಅಧ್ಯಕ್ಷ ಶಶಿಧರ್ ಬಸಾಪುರ, ಶಿವಾನಂದ ಗುರೂಜಿ, ಎನ್.ಜಿ ಶಿವಕುಮಾರ್, ದಿಳ್ಳೆಪ್ಪ, ಮಲ್ಲಿಕಾರ್ಜುನ್ ಮತ್ತಿತರರು ಉಪಸ್ಥಿತರಿದ್ದರು.

# ವಿದ್ಯೆ ಜೊತೆಗೆ ಸಂಸ್ಕಾರ-ಪ್ರಜ್ಞಾವಂತಿಕೆ ಮುಖ್ಯ

**(1ನೇ ಪುಟದಿಂದ)** ಜನ್ಮ ದಿನವನ್ನು ಶಿಕ್ಷಕರ ದಿನಾಚರಣೆಯಾಗಿ ಆಚರಿಸುವುದು ರೂಢಿಯಲ್ಲಿದೆ. ಗುರು ಪೂರ್ಣಿಮೆ ಸಾಂಪ್ರದಾಯಿಕ ಆಚರಣೆಯಾಗಿದೆ.

ಜಪಾನ್ ದೇಶದಲ್ಲಿ ನಿರ್ದಿಷ್ಟವಾಗಿ ಶಿಕ್ಷಕರ ದಿನ ಎಂದು ಆಚರಿಸಲಾಗುವುದಿಲ್ಲ. ಆದರೆ ಜಪಾನಿಯರು ದಿನ ನಿತ್ಯದ ಬದುಕಿನಲ್ಲಿ ಗುರು ಹಿರಿಯರನ್ನು ಗೌರವಿಸುವುದನ್ನು ಬೆಳೆಸಿಕೊಂಡಿರುತ್ತಾರೆ. ಅಂತಹ ಸಂಸ್ಕಾರವನ್ನು ನಮ್ಮ ದೇಶದ ಮಕ್ಕಳೂ ರೂಢಿಸಿಕೊಳ್ಳುವಂತಾಗಬೇಕು. ಜನ್ಮ ದಿನ ಆಚರಿಸಿಕೊಳ್ಳುವುದು ವಿದೇಶಿ ಸಂಸ್ಕೃತಿ. ಹುಟ್ಟಿದ ದಿನ ಮಗು ಅಳುತ್ತಿರುತ್ತದೆ. ಆ ದಿನ ಮತ್ತೆ ಮತ್ತೆ ಬರಲಿ ಎಂದು ಆಶಿಸುವುದು ಸೂಕ್ತವಲ್ಲ. ಮಗು ಜನಿಸಿದಾಗ ತಂದೆ-ತಾಯಿಗಳಿಗೆ ಸಂಭ್ರಮ ದಿನವಾಗಿರುತ್ತದೆ. ಆದುದರಿಂದ

ಜನ್ಮ ದಿನದಂದು ತಂದೆ-ತಾಯಿಗಳನ್ನು ಗೌರವಿಸುವ ದಿನವಾಗಬೇಕು. ಸಿರಿಗೆರೆಯಲ್ಲಿ ಅಭ್ಯಾಸ ಮಾಡಿದ ಮಕ್ಕಳು ಉತ್ತಮ ಸಂಸ್ಕಾರವಂತರಾಗಬೇಕು ಎಂದು ಆಶಿಸಿದರು.

ಗುರು ಪೂರ್ಣಿಮೆಯ ಅಂಗವಾಗಿ ಶ್ರೀಗಳವರಿಂದ ನರ್ಸರಿ ಮಕ್ಕಳಿಗೆ ಅಕ್ಷರಾಭ್ಯಾಸವನ್ನು ಪ್ರಾರಂಭಿಸಲಾಯಿತು.

ಸಮಾರಂಭದಲ್ಲಿ ಸಿರಿಗೆರೆಯ ಹಿರಿಯ ವಿದ್ಯಾರ್ಥಿ, ಮೈಸೂರಿನ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಬಸವಂತ ಗುದಗತ್ತಿಯವರ್ ವಿದ್ಯಾರ್ಥಿ ದಾಸೋಹ ನಿಧಿಗೆ ಒಂದು ಲಕ್ಷ ರೂಪಾಯಿಗಳನ್ನು ಕಾಣಿಕೆಯಾಗಿ ಸಮರ್ಪಿಸಿದರು.

ವೇದಿಕೆಯಲ್ಲಿ ಕೇಶವಮೂರ್ತಿ, ಪ್ರೊ.ಡಿ ರಮೇಶ್, ಅಣ್ಣನ ಬಳಗದ ಅಧ್ಯಕ್ಷ ಮರುಳಸಿದ್ಧಯ್ಯ, ಪ್ರಾಚಾರ್ಯರಾದ ಶಿವಕುಮಾರ ಸುರಕೋಡ, ಎಂ ಎನ್ ಶಾಂತ, ಸೋಮಶೇಖರ್, ಜೆ.ಡಿ ಬಸವರಾಜ್, ಪ್ರವೀಣ ಕುಮಾರ್, ಮುಂತಾದವರು ಪಾಲ್ಗೊಂಡಿದ್ದರು.

# ಗುರು ಮಂದಿರಗಳಲ್ಲಿ ಪೌರ್ಣಿಮೆ ಸಂಭ್ರಮ

**(1ನೇ ಪುಟದಿಂದ)** ಸತ್ಯನಾರಾಯಣ ಪೂಜೆ ನಡೆಯಿತು. ರಾತ್ರಿ 8.30ಕ್ಕೆ ಪಾಲಕಿ ಉತ್ಸವ, ಧುನಿ ಪೂಜೆ, ಶೇಜಾರತಿ ನಡೆಯಿತು.

**ದತ್ತಾತ್ರೇಯ ಮಂದಿರದಲ್ಲಿ ಸಂಭ್ರಮ:** ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಶಿವಾನಂದ ತೀರ್ಥ ಗುರು ಅಧ್ಯಾತ್ಮ ಮಂದಿರ, ಶ್ರೀ ಗುರು ದತ್ತಾತ್ರೇಯ ದೇವಾಲಯದಲ್ಲಿ ಗುರುಪೂರ್ಣಿಮೆ ಅಂಗವಾಗಿ ವಿಶೇಷ ಪೂಜೆಗಳು ನಡೆದವು.

ಶ್ರೀ ಗುರು ದತ್ತಾತ್ರೇಯ ಸ್ವಾಮಿಯ 37ನೇ ವಾರ್ಷಿಕೋತ್ಸವ ಪ್ರತಿಷ್ಠಾಪನಾ ಸುಸ್ಮರಣ ಮತ್ತು 108 ಶ್ರೀ ಸತ್ಯದತ್ತ ವ್ರತ ಮಹೋತ್ಸವ ಹಮ್ಮಿಕೊಳ್ಳಲಾಗಿತ್ತು.

ಪ್ರಾತಃಕಾಲ ಕಾಕಡಾರತಿ, ಗಣಪತಿ ಪೂಜೆ, ಪಂಚಾಮೃತ ಅಭಿಷೇಕ ನಡೆಯಿತು. ವಿಶೇಷ ಅಲಂಕಾರ ಮಾಡಲಾಗಿತ್ತು. ಬೆಳಿಗ್ಗೆ 10ಕ್ಕೆ 108 ಕಳಶಗಳ ಶ್ರೀ ಸತ್ಯ ದತ್ತವ್ರತ ಪೂಜೆ ನಡೆಯಿತು.

ಸಂಜೆ ಶ್ರೀ ಸಾಯಿ ಭಜನಾ ಮಂಡಳಿ ಹಾಗೂ ಶ್ರೀ ವೈಷ್ಣವಿ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ನಡೆಯಿತು. ಬೆಳಿಗ್ಗೆಯಿಂದ ರಾತ್ರಿ ವರೆಗೂ ಭಕ್ತರು ಗುರುವಿನ ದರ್ಶನ ಪಡೆದರು. ಸುಮಾರು 2 ಸಾವಿರ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಪಿ.ಜೆ. ಬಡಾವಣೆ ಹಾಗೂ ಕಸ್ತೂರಬಾ ಬಡಾವಣೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲೂ ಸಹ ಗುರುರಾಯರಿಗೆ ವಿಶೇಷ ಪೂಜೆಗಳು ನಡೆದು, ವಿಶೇಷ ಅಲಂಕಾರ ಮಾಡಲಾಗಿತ್ತು. ಶ್ರೀಮಠಗಳಲ್ಲೂ ಭಕ್ತರ ಸಂಖ್ಯೆ ಹೆಚ್ಚಾಗಿತ್ತು.

# ಪೊಲೀಸ್ ಇಲಾಖೆಯಿಂದ ಮಾದಕ ವಸ್ತು ಜಾಗೃತಿ



ದಾವಣಗೆರೆ, ಜು.3- ಅಂತರರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ಹಾಗೂ ಮಾದಕ ವಸ್ತುಗಳ ಕಳ್ಳ ಸಾಗಾಣಿಕೆ ವಿರೋಧಿ ದಿನದ ಅಂಗವಾಗಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಪೊಲೀಸ್ ಅಧೀಕ್ಷಕ ಡಾ. ಕೆ. ಅರುಣ್ ಅವರ ನಿರ್ದೇಶನದಂತೆ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್.ಬಿ.ಬಸರಗಿ ಮಾರ್ಗದರ್ಶನದಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲೆಯಾದ್ಯಂತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ, ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳನ್ನು ತಿಳಿಸಲಾಯಿತು. ಹಾಗೆಯೇ ಮಾದಕ ವಸ್ತುಗಳ ಕಳ್ಳಸಾಗಾಣಿಕೆ ಮಾಡುವುದು ಕಾನೂನು ವಿರುದ್ಧವಾಗಿದ್ದು, ಸೂಕ್ತ ಕಾನೂನು ಕ್ರಮ ಕೈಗೊಂಡು ಶಿಕ್ಷೆಗೆ ಒಳಪಡಿಸಲಾಗುತ್ತದೆ ಎಂದು ಎಚ್ಚರಿಸಿ, ಜಾಗೃತಿ ವಹಿಸಿ ಸದೃಢ ಸಮಾಜ ನಿರ್ಮಾಣ ಕಾರ್ಯದಲ್ಲಿ ಕೈಜೋಡಿಸಬೇಕೆಂದು ತಿಳಿಸಲಾಯಿತು.

ಅಲ್ಲದೇ ಪೊಲೀಸ್ ಉಪ ವಿಭಾಗ ಕಛೇರಿ, ವೃತ್ತ ಕಛೇರಿ ಮತ್ತು ಪೊಲೀಸ್ ಠಾಣಾ ಮಟ್ಟದಲ್ಲಿ ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮಗಳ ಜಾಗೃತಿ ಹಿನ್ನೆಲೆಯಲ್ಲಿ ಶಾಲಾ-ಕಾಲೇಜು ಪ್ರಿನ್ಸಿಪಾಲರುಗಳು, ಹಾಸ್ಟೆಲ್ ಮುಖ್ಯಸ್ಥರುಗಳನ್ನು ಕರೆಯಿಸಿ, ಸಭೆ ನಡೆಸಿ, ಶಾಲಾ- ಕಾಲೇಜುಗಳಲ್ಲಿ ಹಾಗೂ ಹಾಸ್ಟೆಲ್‌ಗಳಲ್ಲಿ ಹಾಗೂ ಸದರಿ ಸ್ಥಳಗಳ ಆವರಣಗಳಲ್ಲಿ ಮಾದಕ ವಸ್ತುಗಳ ಸೇವನೆಗೆ ಹಾಗೂ ಸಾಗಾಣಿಕೆಗೆ ಅವಕಾಶ ಆಗದಂತೆ ತೀವ್ರ ನಿಗಾವಹಿಸುವುದು. ಈ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿ, ಸೂಕ್ತ ತಿಳುವಳಿಕೆ ನೀಡುವುದು. ಹಾಗೇನಾದರೂ ಕಂಡುಬಂದರೆ ಕೂಡಲೇ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ತಿಳಿಸಲಾಯಿತು.

# ಪದವಿ ನಂತರ ಹಲವು ಅವಕಾಶಗಳಿವೆ



ದಾವಣಗೆರೆ, ಜು. 3- ಸ್ನಾತಕ ಪದವಿ ನಂತರ ವಿದ್ಯಾರ್ಥಿಗಳಿಗೆ ಹಲವಾರು ಅವಕಾಶಗಳಿವೆ. ಅವುಗಳನ್ನು ಬಳಸಿ ಉನ್ನತ ಶಿಕ್ಷಣ ಪಡೆಯುವಂತವರಾಗಬೇಕು. ಪ್ರತಿಯೊಬ್ಬರಿಗೂ ಉನ್ನತ ಶಿಕ್ಷಣ ಕಡ್ಡಾಯವಾದಾಗ ವ್ಯಕ್ತಿಯ ಅಭಿವೃದ್ಧಿ ಹಾಗೂ ದೇಶದ ಅಭಿವೃದ್ಧಿಯಾಗಲು ಸಾಧ್ಯ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವೆಂಕಟೇಶ್ ಬಾಬು ಹೇಳಿದರು.

ಅವರು ನಗರದ ಚಾಣಕ್ಯ ಪ್ರಥಮ ದರ್ಜೆ ಕಾಲೇಜಿನ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗಾಗಿ ಇಂದು ಆಯೋಜಿಸಿದ್ದ ಪದವಿ ನಂತರ ಮುಂದೇನು? ಕಾರ್ಯಕ್ರಮದಲ್ಲಿ ಮಾತನಾಡಿದರು.

ಪದವಿ ನಂತರ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ಮೂರು ಅವಕಾಶಗಳಿವೆ. ಉನ್ನತ ಶಿಕ್ಷಣ, ಕೆಲಸ, ಮತ್ತು ಸ್ವಂತ ವ್ಯವಹಾರ ಆರಂಭಿಸುವುದು. ಪದವಿ ಪಡೆದ ವಿದ್ಯಾರ್ಥಿಗಳು ತಮ್ಮ ಕುಟುಂಬದ ಆರ್ಥಿಕ ಪರಿಸರಕ್ಕೆ ಹೊಂದಿಕೊಳ್ಳುವಂತೆ ನಿರ್ಧಾರವನ್ನು ಕೈಗೊಳ್ಳಬೇಕು. ಅನಿವಾರ್ಯವಿದ್ದರೆ ಕೆಲಸಕ್ಕೆ ಹೋಗಬೇಕು. ಇಲ್ಲದಿದ್ದರೆ ಉನ್ನತ ಶಿಕ್ಷಣ ಪಡೆಯುವ ನಿಟ್ಟಿನಲ್ಲಿ ಯೋಚಿಸಿ ಉತ್ತಮ ಕಾಲೇಜುಗಳಲ್ಲಿ ಉನ್ನತ ಶಿಕ್ಷಣ ಪಡೆಯಬೇಕು. ಉತ್ತಮ ಉದ್ಯೋಗ ಹೊಂದಿದಾಗ ಉತ್ತಮವಾದ ಸುಗಮ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಪ್ರತಿಯೊಬ್ಬರಿಗೂ ಸರ್ಕಾರಿ ಕೆಲಸದ ಮೇಲೆ ವ್ಯಾಮೋಹ ಹೆಚ್ಚು. ಆದರೆ ಎಲ್ಲರಿಗೂ ಸರ್ಕಾರಿ ಕೆಲಸ ಸಿಗುವುದು ಕಷ್ಟ. ಅದು ಸಾಧ್ಯವೂ ಆಗುವುದಿಲ್ಲ. ಹಾಗಾಗಿ ಸರ್ಕಾರಿ ಕೆಲಸಕ್ಕೆ ಪ್ರಯತ್ನಿಸುವವರು ನಿಷ್ಠೆಯಿಂದ ಕಷ್ಟಪಟ್ಟು ಅದನ್ನು ಪಡೆಯುವಲ್ಲಿ ಪ್ರಯತ್ನಿಸಬೇಕು. ಇಲ್ಲದೇ ಹೋದರೆ ಅದೇ ಜೀವನವಲ್ಲ ಎಂಬುದನ್ನು ಅರಿತು, ಇತರೆ ಖಾಸಗಿ ವಲಯದಲ್ಲಿ ಉತ್ತಮವಾದ ಕೆಲಸ, ಸಂಬಳ ಎರಡೂ ದೊರೆಯುತ್ತದೆ. ಅದಕ್ಕಾಗಿ ಒಂದಿಷ್ಟು ಕೌಶಲ್ಯಗಳನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಪ್ರೊ ಕೆ. ರಾಜಶೇಖರ್ ಹಾಗೂ ಡೀನ್ ಬಿ ಆರ್ ಟಿ ಸ್ವಾಮಿ ಭಾಗವಹಿಸಿದ್ದರು.

## ಆಡಳಿತಾಧಿಕಾರಿಯಾಗಿ ನ್ಯಾಯಾಧೀಶರು

**(1ನೇ ಪುಟದಿಂದ)** ಸಮುದಾಯದ ಮುಖಂಡರು ಆರು ವಾರಗಳ ಒಳಗಾಗಿ ಮಧ್ಯಂತರ ವ್ಯವಸ್ಥೆ ಮಾಡಿಕೊಳ್ಳಬೇಕು. ಅಲ್ಲಿಯವರೆಗೆ ಸರ್ಕಾರ ನೇಮಿಸಿರುವ ಆಡಳಿತಾಧಿಕಾರಿಯನ್ನು ಮುಂದುವರೆಸಲಾಗುತ್ತಿದೆ ಎಂದು ನಿರ್ದೇಶಿಸಿತ್ತು. ಏಕಸದಸ್ಯ ನ್ಯಾಯಪೀಠದ ಈ ಆದೇಶವನ್ನು ಪ್ರಶ್ನಿಸಿ ಮಾಜಿ ಸಚಿವ ಎಚ್. ಏಕಾಂತಯ್ಯ ಹಾಗೂ ಇತರರು ಮೇಲ್ಮನವಿ ಸಲ್ಲಿಸಿದ್ದರು.

## ಹರಿಹರೇಶ್ವರ ಸ್ವಾಮಿಗೆ ಪೂಜೆ



ಹರಿಹರ, ಜು. 3 - ನಗರದ ಇತಿಹಾಸ ಪ್ರಸಿದ್ಧ ಶ್ರೀ ಹರಿಹರೇಶ್ವರ ಸ್ವಾಮಿ ಮತ್ತು ಲಕ್ಷ್ಮ ದೇವಿಗೆ ಗುರು ಪೂರ್ಣಿಮೆ ಪ್ರಯುಕ್ತ ವಿಶೇಷ ಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಪ್ರಧಾನ ಅರ್ಚಕ ಶ್ರೀನಿವಾಸ್ ಮೂರ್ತಿ, ಗುರುಪ್ರಸಾದ್, ಶೇಷಾಚಲ ಮತ್ತಿತರರು ಉಪಸ್ಥಿತರಿದ್ದರು.

## ದೆಹಲಿ ವಿಶೇಷ ಪ್ರತಿನಿಧಿಯಾಗಿ ಟಿ.ಬಿ. ಜಯಚಂದ್ರ

**(1ನೇ ಪುಟದಿಂದ)** ಅವರನ್ನು ವಿಧಾನಸಭೆಯ ಆಡಳಿತ ಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಿಸಿದ್ದಾರೆ. ವಿಧಾನ ಪರಿಷತ್ತಿನ ಆಡಳಿತ ಪಕ್ಷದ ಮುಖ್ಯ ಸಚೇತಕರಾಗಿ ಸಲೀಂ ಅಹ್ಮದ್ ಅವರನ್ನು ಮುಖ್ಯಮಂತ್ರಿ ನೇಮಕ ಮಾಡಿದ್ದಾರೆ.

# ವಿಶ್ವಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆ ಪರಿಚಯಿಸಿದ ಕರ್ನಾಟಕ

ದಾವಣಗೆರೆ, ಜು. 3-ಪ್ರಜಾಪ್ರಭುತ್ವವನ್ನು ಇಡೀ ವಿಶ್ವಕ್ಕೆ ಪರಿಚಯಿಸಿದ ನಾಡು ಕನ್ನಡ ನಾಡು ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಹೇಳಿದರು.

ನಗರದ ಈಶ್ವರಮ್ಮ ಶಾಲೆಯಲ್ಲಿ ಹಮ್ಮಿಕೊಂಡಿದ್ದ 2023-24 ನೇ ಸಾಲಿನ ಶಾಲಾ ಮಂತ್ರಿ ಮಂಡಲದ ಪ್ರತಿಜ್ಞಾ ಸ್ವೀಕಾರ ಮತ್ತು ವಿದ್ಯಾರ್ಥಿ ಸಂಘಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಹನ್ನೆರಡನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ಎಲ್ಲಾ ಶಿವ ಶರಣರು ಮುಕ್ತವಾಗಿ ಚರ್ಚಿಸಲು ಅವಕಾಶವಿತ್ತು. ಅನುಭವ ಮಂಟಪವನ್ನು ಜಗತ್ತಿನ ಮೊದಲನೆ ಪಾರ್ಲಿಮೆಂಟ್ ಎಂದು ಕರೆಯಲಾಗಿದೆ ಎಂದರು.



ಬ್ರಿಟಿಷರ ಗುಲಾಮಗಿರಿಯಿಂದ ಮುಕ್ತವಾಗಿ ಸ್ವತಂತ್ರ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವತಂತ್ರವಾಗಿ ಶಾಂತಿಯುತವಾಗಿ ಬದುಕುತ್ತಿದ್ದೇವೆ. ಅದರ ಪ್ರತಿರೂಪವೇ ಶಾಲಾ ಮಂತ್ರಿಮಂಡಲವಾಗಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಲಾ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಕೆ. ಆರ್. ಸುಜಾತ ಕೃಷ್ಣ ಮಾತನಾಡಿ, ಮಂತ್ರಿ ಮಂಡಲದ ಎಲ್ಲಾ ವಿದ್ಯಾರ್ಥಿಗಳು ಪ್ರಮಾಣ ವಚನ ಸ್ವೀಕ ರಿಸಿದಂತೆ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕಬೇಕು. ಮಂತ್ರಿ ಮಂಡಲದ ಉದ್ದೇಶವನ್ನು ಸಾರ್ಥಕಪಡಿಸಿಕೊಂಡು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯಿರಿ ಎಂದು ಹಾರೈಸಿದರು.

ಚುನಾವಣೆಯಲ್ಲಿ ಅತಿ ಹೆಚ್ಚು ಮತಗಳನ್ನು ಪಡೆದ 10 ನೇ ತರಗತಿ ವಿದ್ಯಾರ್ಥಿನಿ ಹೆಚ್. ಎಂ. ಶ್ರೀದೇವಿ ಮುಖ್ಯಮಂತ್ರಿಯಾಗಿ, ಆರ್. ಎಲ್. ಸುಭಾಷ್ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದರು.

ಸಹ ಶಿಕ್ಷಕಿ ಹೇಮಲತಾ ಚುನಾವಣಾ ಪ್ರಕ್ರಿಯೆ ವಿವರಿಸಿದರು. 25 ಸಚಿವರನ್ನು ಒಳಗೊಂಡ ಶಾಲಾ ಮಂತ್ರಿಮಂಡಲದಲ್ಲಿ ರಾಜ್ಯಪಾಲರಾಗಿ ಪ್ರಾಂಶುಪಾಲ ಕೆ.ಎಸ್. ಪ್ರಭುಕುಮಾರ್, ಸಭಾಪತಿಯಾಗಿ ಉಪ ಪ್ರಾಂಶುಪಾಲರಾದ ಜಿ.ಎಸ್. ಶಶಿರೇಖಾ, ಸಂಪುಟ ಕಾರ್ಯದರ್ಶಿಯಾಗಿ ಸಹ ಶಿಕ್ಷಕಿ ರೋಹಿಣಿ ಎಂ. ಬಾವಿ ನಾಯಕರಾಗುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾದರು.

ಸಹ ಶಿಕ್ಷಕಿ ರಂಜಿನಿ ವಿದ್ಯಾರ್ಥಿ ಸಂಘಗಳನ್ನು ಪರಿಚಯಿಸಿದರು. ಈಶ್ವರಮ್ಮ ಟ್ರಸ್ಟ್ ಕಾರ್ಯದರ್ಶಿ ಜಿ.ಆರ್. ವಿಜಯಾನಂದ್ ಉಪಸ್ಥಿತರಿದ್ದರು. ಜಿ.ಎಸ್. ಶಶಿರೇಖಾ ಸ್ವಾಗತಿಸಿದರು. ಎನ್.ಎಸ್. ಸವಿತ ವಂದಿಸಿದರು. ಬಿ. ಶ್ರೀದೇವಿ ನಿರೂಪಿಸಿದರು.

# ಬುಡಕಟ್ಟು ಜನರಿಗೆ ಏಕರೂಪ ನಾಗರಿಕ ಸಂಹಿತೆ ಬೇಡ

**ಬಿಜೆಪಿ ಸಂಸದ ಸುಶೀಲ್ ಮೋದಿ**

ನವದೆಹಲಿ, ಜು. 3 – ಬುಡಕಟ್ಟು ಸಮುದಾಯವನ್ನು ಏಕರೂಪ ನಾಗರಿಕ ಸಂಹಿತೆ ವ್ಯಾಪ್ತಿಯಿಂದ ಹೊರಗಿಡಬೇಕು ಎಂದು ಬಿಜೆಪಿ ಸಂಸದ ಸುಶೀಲ್ ಮೋದಿ ಅವರು ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಸಂಸತ್ ಸಮಿತಿ ಸಭೆಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಕಾನೂನು ಆಯೋಗವು ಏಕರೂಪ ನಾಗರಿಕ ಸಂಹಿತೆ ಕುರಿತು ಸಮಾಲೋಚನೆ ಆರಂಭಿಸಿದೆ. ಈ ಹಿನ್ನೆಲೆಯಲ್ಲಿ ಸಂಸತ್ ಸಮಿತಿ ಸಭೆ ಪ್ರಾಮುಖ್ಯತೆ ಪಡೆದಿದೆ.

ಲೋಕಸಭಾ ಚುನಾವಣೆಗೆ ವರ್ಷವಿರುವಾಗ ಈ ಸಮಾಲೋಚನೆ ಆರಂಭಿಸಲಾಗಿದೆ ಎಂದು ಕಾಂಗ್ರೆಸ್ ಹಾಗೂ ಡಿಎಂಕೆ ಸೇರಿದಂತೆ ಹಲವಾರು ಪ್ರತಿಪಕ್ಷಗಳು ಆಕ್ಷೇಪಿಸಿವೆ. ಏಕರೂಪ ನಾಗರಿಕ ಸಂಹಿತೆಗೆ ಸಂಬಂಧಿಸಿದಂತೆ ಹಲವು ಸಮುದಾಯ ಹಾಗೂ ಪ್ರಾಂತ್ಯಗಳ ಸಲಹೆ ಪಡೆಯಬೇಕು ಎಂದು ಶಿವಸೇನೆಯ ಸಂಸದ ಸಂಜಯ್ ರಾವತ್ ತಿಳಿಸಿದ್ದಾರೆ.

ಕಾನೂನು ಆಯೋಗದ ಅವಧಿ ಆಗಸ್ಟ್ 31, 2018ಕ್ಕೆ ಮುಕ್ತಾಯಗೊಂಡಿದೆ.

ಈ ಹಂತದಲ್ಲಿ ಕಾನೂನು ಆಯೋಗ ಸಮಾಲೋಚನೆಗೆ ಮುಂದಾಗುವುದು ಅಪೇಕ್ಷಣೀಯವಲ್ಲ ಎಂದು ಕಾಂಗ್ರೆಸ್ ಸಂಸದ ವಿವೇಕ್ ಟಂಖ ಹಾಗೂ ಡಿಎಂಕೆ ಸಂಸದ ಪಿ. ವಿಲ್ಸನ್ ತಿಳಿಸಿದ್ದಾರೆ.

ಆದರೆ, ಸಮಾಲೋಚನಾ ಪ್ರಕ್ರಿಯೆ ಸಮರ್ಥಿಸಿರುವ ಬಿಜೆಪಿ ಸಂಸದ ಮಹೇಶ್ ಜೇಠ್ಮಲಾನಿ, ಸಂವಿಧಾನ ರಚನಾ ಸಮಿತಿ ಸಭೆಯಲ್ಲೂ ಏಕರೂಪ ನಾಗರಿಕ ಸಂಹಿತೆ ಚರ್ಚೆ ನಡೆದಿತ್ತು. ಈ ವಿಷಯ ಸದಾ ಪ್ರಸ್ತುತ ಎಂದಿದ್ದಾರೆ.

ಬುಡಕಟ್ಟು ಜನರನ್ನು ಏಕರೂಪ ನಾಗರಿಕ ಸಂಹಿತೆಯಿಂದ ಹೊರಗಿಡಬೇಕು ಎಂದು ಹೇಳಿರುವ ಸುಶೀಲ್ ಮೋದಿ, ಎಲ್ಲಾ ಕಾನೂನುಗಳಿಗೂ ಅಪವಾದ ಇದ್ದೇ ಇರುತ್ತವೆ ಎಂದಿದ್ದಾರೆ.

# ಮಲೇಬೆನ್ನೂರಿನಲ್ಲಿ ಹಡಪದ ಅಪ್ಪಣ್ಣ ಜಯಂತಿ



ಮಲೇಬೆನ್ನೂರು, ಜು. 3- ಇಲ್ಲಿನ ಪುರಸಭೆ ಹಾಗೂ ನಾಡ ಕಛೇರಿ ಮತ್ತು ಹಡಪದ ಅಪ್ಪಣ್ಣ ಸಮಾಜದ ವತಿಯಿಂದ ವಚನಕಾರ ಶಿವಶರಣ ಹಡಪದ ಅಪ್ಪಣ್ಣ ಅವರ ಜಯಂತಿಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಹಡಪದ ಅಪ್ಪಣ್ಣ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್, 12ನೇ ಶತಮಾನದಲ್ಲಿ ಬಸವಣ್ಣನವರ ಅನುಯಾಯಿಯಾಗಿದ್ದ ಹಡಪದ ಅಪ್ಪಣ್ಣ ಅವರು ಸಮಾಜದ ಅಂಕು-ಡೊಂಕುಗಳನ್ನು ತೊಡೆದು ಹಾಕಲು ಶ್ರಮಿಸಿದರು. ಮೌಢ್ಯವನ್ನು ಹೋಗಲಾಡಿಸಲು ಬಸವಣ್ಣನವರು ಪ್ರತಿದಿನ ಬೆಳಿಗ್ಗೆ ಅವರನ್ನು ಭೇಟಿ ಮಾಡಿದ ನಂತರವೇ ಬೇರೆಯವರನ್ನು ಭೇಟಿ ಮಾಡುತ್ತಿದ್ದರು. ನಮ್ಮ ಮುಖದ ಸೌಂದರ್ಯವನ್ನು ಹೆಚ್ಚಿಸಲು ಹಡಪದ ಅಪ್ಪಣ್ಣ ಸಮಾಜದವರು ತಮ್ಮ ಕಾಯಕವನ್ನು ಶ್ರದ್ಧೆಯಿಂದ ಮಾಡುತ್ತಾ, ನವ ಸಮಾಜ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆಂದು ಸುರೇಶ್ ಹೇಳಿದರು.

ಉಪ ತಹಶೀಲ್ದಾರ್ ಆರ್. ರವಿ ಅವರು ಎಲ್ಲರಿಗೂ ಶುಭಾಶಯ ಕೋರಿದರು. ಪುರಸಭೆ ಸದಸ್ಯರಾದ ಕೆ.ಜಿ. ಲೋಕೇಶ್, ಸಾಬೀರ್ ಅಲಿ ಮಾತನಾಡಿ, ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರಿಂದಾಗಿ ಮೂಢನಂಬಿಕೆಗಳಲ್ಲಿ ಕಳೆದು ಹೋಗಿದ್ದ ಜನರು, ಇಂದು ಪ್ರಜ್ಞಾವಂತರಾಗಿ ಸಮಾಜದಲ್ಲಿ ಮುಂದೆ ಬರುತ್ತಿದ್ದಾರೆ ಎಂದರು.

ಸಮಾಜದ ಮುಖಂಡ ಕೆ.ಬಿ. ಚನ್ನಬಸಪ್ಪ ಮಾತನಾಡಿ, ಹಡಪದ ಅಪ್ಪಣ್ಣ ಸಮಾಜಕ್ಕೆ ಅಗತ್ಯ ಸೌಲಭ್ಯ ಕಲ್ಪಿಸುವಂತೆ ಕೋರಿದರು.

ಪುರಸಭೆ ಸದಸ್ಯರಾದ ಖಲೀಲ್, ನಯಾಜ್, ಭೋವಿ ಶಿವು, ಟಿ. ಹನುಮಂತಪ್ಪ, ಷಾ ಅಬ್ರಾರ್, ಮಾಜಿ ಸದಸ್ಯರಾದ ಪಿ.ಆರ್. ರಾಜು, ಯುಸೂಫ್, ಪುರಸಭೆ ಅಧಿಕಾರಿಗಳಾದ ದಿನಕರ್, ಹಾಲೇಶಪ್ಪ, ಪ್ರಭು, ಶಿವರಾಜ್, ಶ್ರೀಮತಿ ಮಮ್ತಾಜ್, ನಾಡಕಛೇರಿಯ ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ಕಛೇರಿಯ ಶ್ರೀಮತಿ ಪುಷ್ಪ ಹಿರೇಮಠ್, ಶ್ರೀಮತಿ ಶಿಲ್ಪ, ಬಸವರಾಜ್, ಹಡಪದ ಅಪ್ಪಣ್ಣ ಸಮಾಜದ ಕೆ.ಬಿ. ನವೀನ್‌ಕುಮಾರ್, ಕೆ. ವೀರಭದ್ರಪ್ಪ, ಕೆ. ಅಂಬರೀಶ್, ಬಿ.ಕೆ. ನಾಗರಾಜ್, ವಿರೂಪಾಕ್ಷಪ್ಪ, ಜಿಗಳಿಯ ಕೆ.ಬಿ. ಮಂಜುನಾಥ್, ಕೆ.ಜಿ. ವಿರೂಪಾಕ್ಷಿ, ಕೆ.ಎಸ್. ಮಾಲತೇಶ್, ಕೆ.ಪಿ. ಅಭಿಷೇಕ್, ಎಂ.ಎನ್. ಕುಮಾರ್, ಸವಿತಾ ಸಮಾಜದ ಅಧ್ಯಕ್ಷ ಕೆ.ಬಿ. ಶ್ರೀನಿವಾಸ್, ವಾಲ್ಮೀಕಿ-ನಾಯಕ ಸಮಾಜದ ಪಾಳೇಗಾರ್ ನಾಗರಾಜ್, ಪ್ರಗತಿ ಪರ ರೈತ ಹೆಚ್.ಜಿ. ವಿರೂಪಾಕ್ಷಪ್ಪ ಸೇರಿದಂತೆ, ಇನ್ನೂ ಅನೇಕರು ಭಾಗವಹಿಸಿದ್ದರು.

# ರಾಜ್ಯಗಳ ಹಣಕಾಸಿನಲ್ಲಿ ಹೆಚ್ಚಿನ ಪಾರದರ್ಶಕತೆ ಅಗತ್ಯ

**ನೀತಿ ಆಯೋಗ**

ನವದೆಹಲಿ, ಜು. 3 – ರಾಜ್ಯಗಳು ಹಣಕಾಸು ವಿಷಯದಲ್ಲಿ ಹೆಚ್ಚಿನ ಪಾರದರ್ಶಕತೆ ಹೊಂದುವುದರಿಂದ ಅವುಗಳು ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ದರದಲ್ಲಿ ಸಂಪನ್ಮೂಲ ಪಡೆಯಲು ಸಾಧ್ಯವಾಗುತ್ತದೆ ಎಂದು ನೀತಿ ಆಯೋಗದ ಸಿಇಒ ಬಿ.ವಿ.ಆರ್. ಸುಬ್ರಮಣ್ಯಂ ಹೇಳಿದ್ದಾರೆ. ಸೆಂಟರ್ ಫಾರ್ ಸೋಶಿಯಲ್ ಅಂಡ್ ಎಕನಾಮಿಕ್ ಪ್ರೊಗ್ರೆಸ್ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯಗಳ ಸಾಲ ನಿರ್ವಹಣೆಗಾಗಿ ಹಣಕಾಸು ಮಂಡಳಿಯೊಂದನ್ನು ರಚಿಸಬೇಕಿದೆ ಎಂದು ಹೇಳಿದರು.

ಮಾರುಕಟ್ಟೆ ಪಾರದರ್ಶಕತೆಯನ್ನು ಗೌರವಿಸುತ್ತದೆ. ಹೀಗಾಗಿ ರಾಜ್ಯಗಳು ಯಾವುದಾದರೂ ಸ್ವರೂಪದಲ್ಲಿ ಹಣಕಾಸು ಪಾರದರ್ಶಕತೆ ಹೊಂದುವ ಅಗತ್ಯವಿದೆ ಎಂದು ಸುಬ್ರಮಣ್ಯಂ ತಿಳಿಸಿದರು. ದಕ್ಷಿಣ ಭಾರತದ ಐದು ರಾಜ್ಯಗಳು ಕಳೆದ ವರ್ಷ ಬಜೆಟ್ ಹೊರತಾದ ಶೇ.93ರಷ್ಟು ಸಾಲ ಪಡೆದಿವೆ. ಮತ್ತೊಂದೆಡೆ ಪಶ್ಚಿಮ ಬಂಗಾಳ, ಪಂಜಾಬ್ ಹಾಗೂ ರಾಜಸ್ಥಾನಗಳು ಬಜೆಟ್ ಹೊರತಾದ ಸಾಲದ ಪ್ರಮಾಣದಲ್ಲಿ ಹಿಂದಿವೆ ಎಂದವರು ತಿಳಿಸಿದರು.

ದಕ್ಷಿಣದ ಐದು ರಾಜ್ಯಗಳಲ್ಲಿ ಹೆಚ್ಚು ಶಿಸ್ತಿರುವ ಕಾರಣ ಬಜೆಟ್ ಹೊರತಾದ ಸಾಲ ಪಡೆಯಲು ಸಾಧ್ಯವಾಗಿದೆ. ತಮಿಳುನಾಡು ಇಲ್ಲವೇ ಕರ್ನಾಟಕದ ಸಾಲ ಪ್ರಕ್ರಿಯೆಗೆ ಹೆಚ್ಚು ಸ್ಪಂದನೆ ಸಿಗುತ್ತದೆ. ಆದರೆ, ಪಶ್ಚಿಮ ಬಂಗಾಳ ಇಲ್ಲವೇ ಪಂಜಾಬ್‌ಗಳಿಗೆ ಈ ಪ್ರತಿಕ್ರಿಯೆ ಸಿಗುತ್ತಿಲ್ಲ ಎಂದವರು ತಿಳಿಸಿದರು.

# ಶಾಂತನಗೌಡರ ಗೆಲುವು : ಹರಕೆ ತೀರಿಸಿದ ಕುಟುಂಬಸ್ಥರು



ಹೊನ್ನಾಳಿ, ಜು. 3- ಶಾಸಕ ಡಿ.ಜಿ. ಶಾಂತನಗೌಡರ ಗೆಲುವಿನ ಹಿನ್ನೆಲೆಯಲ್ಲಿ ಅವರ ಕುಟುಂಬಸ್ಥರು ಸ್ವಗ್ರಾಮ ಬೆನಕನಹಳ್ಳಿಯಿಂದ ಚನ್ನಗಿರಿ ತಾಲ್ಲೂಕಿನ ಮರಬನಹಳ್ಳಿಯ ಗುಡ್ಡದ ಬಸವೇಶ್ವರ ದೇವಸ್ಥಾನಕ್ಕೆ ಇಂದು ಪಾದಯಾತ್ರೆ ಮೂಲಕ ತೆರಳಿ ತಮ್ಮ ಹರಕೆ ತೀರಿಸಿದರು.

ಬೆನಕನಹಳ್ಳಿಯ ಶ್ರೀ ವಿನಾಯಕ ದೇವಸ್ಥಾನದಿಂದ ಬೆಳಿಗ್ಗೆ ಮಡಿ ಮತ್ತು ಉಪವಾಸದಿಂದ ಮರಬನಹಳ್ಳಿ ಗ್ರಾಮದ ತಮ್ಮ ಮನೆ ದೇವರಾದ ಗುಡ್ಡದ ಬಸವೇಶ್ವರ ದೇವಸ್ಥಾನಕ್ಕೆ 13 ಕಿ.ಮೀ ಕ್ರಮಿಸಿ, ತಮ್ಮ ಮನೆ ದೇವರಿಗೆ ಭಕ್ತಿ-ಭಾವದಿಂದ ವಿಶೇಷ ಪೂಜಾ-ಕೈಂಕರ್ಯಗಳನ್ನು ನೆರವೇರಿಸಿದರು.

ಶಾಂತನಗೌಡರ ಸೊಸೆಯಂದಿರಾದ ಡಿ.ಎಸ್. ಸೌಮ್ಯ ಪ್ರದೀಪ್‌ಗೌಡ, ಡಿ.ಎಸ್.ವಾಣಿ ಸುರೇಂದ್ರಗೌಡ ಅವರ ನೇತೃತ್ವದಲ್ಲಿ 16 ಕ್ಕೂ ಹೆಚ್ಚು ಮಹಿಳೆಯರ ತಂಡವು ಚುನಾವಣಾ ಅಖಾಡಕ್ಕೆ ಧುಮುಕಿ ಚುನಾವಣಾ ಪ್ರಚಾರದ ಅನುಭವ ಇಲ್ಲದಿದ್ದರೂ ಅವಳಿ ತಾಲ್ಲೂಕಿನ ಪ್ರತೀ ಹಳ್ಳಿಗಳಲ್ಲೂ ಮಿಂಚಿನಂತೆ ಸಂಚರಿಸಿ ಅವಳಿ ತಾಲ್ಲೂಕಿನ ಮತದಾರರ ಮತ ಪಡೆಯುವಲ್ಲಿ ಯಶಸ್ವಿಯಾಗಿದ್ದರು.

ಶಾಂತನಗೌಡರ ಕುಟುಂಬದ ಮಹಿಳೆಯರು ಮೊದಲಿನಿಂದಲೂ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗುತ್ತಿರಲಿಲ್ಲ ಎಂಬ ಅಪವಾದವನ್ನು ದೂರ ಮಾಡಿ ಅನುಭವವಿರುವವರಂತೆಯೇ ಚುನಾವಣಾ ರಣಕಣದಲ್ಲಿ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿ, ಗೆಲುವಿನ ನಗೆ ಬೀರಿದರು.

ಇಂದು ಸೋಮವಾರ ಮನೆ ದೇವರ ವಾರ ಮತ್ತು ವಿಶೇಷವಾಗಿ ಗುರು ಪೂರ್ಣಿಮೆ ದಿನವಾಗಿದ್ದು ಇತ್ತ ಕುಟುಂಬಸ್ಥರು ಪಾದಯಾತ್ರೆ ಮೂಲಕ ಹರಕೆ ತೀರಿಸುತ್ತಿದ್ದಂತೆಯೇ ಅತ್ತ ಶಾಸಕ ಡಿ.ಜಿ.ಶಾಂತನಗೌಡ ಅವರು ಬೆಂಗಳೂರಿನ ರಾಜ್ಯ ಸಹಕಾರ ಮಂಡಳಿಯ ನೂತನ ನಿರ್ದೇಶಕರಾಗಿ ಸತತ 5ನೇ ಬಾರಿಗೆ ಪುನರ್ ಆಯ್ಕೆಯಾಗಿರುವುದು ಕುಟುಂಬಸ್ಥರಲ್ಲಿ ಅಚ್ಚರಿ ಮತ್ತು ಸಂತಸ ಮೂಡಿಸಿದೆ.

ಪಾದಯಾತ್ರೆ ತಂಡದಲ್ಲಿ ಕವಿತಾ ಸುರೇಶ್, ದೀಪಾರಘು, ಲೀಲಾ ಮಂಜುನಾಥ್, ಲತಾ ಗಿರೀಶ್, ಎಚ್.ಜಿ.ಮುಂಜುಳಾ ಗಣೇಶ್, ಕೀರ್ತನಾ ಕಿರಣ್, ಶೀಲಾ ಅರುಣ್, ಮಂಜುಳಾ ಗಣೇಶ್, ರೂಪಾ ಸುನೀಲ್, ನಂದಾ ಏಕನಾಥ್ ದಂಪತಿಗಳು ಮತ್ತು ಶಾಸಕರ ಮೊಮ್ಮಕ್ಕಳಾದ ಮೇಘನಾ, ಚಂದನ್, ಶ್ರೀಧರ್ ಮತ್ತಿತರರು ಪಾಲ್ಗೊಂಡಿದ್ದರು.

# ಮಾದಿಗ ಸಮುದಾಯವನ್ನು ಅವಮಾನಿಸುವುದು ಸಲ್ಲದು

ದಾವಣಗೆರೆ, ಜು. 3- ಒಳ ಮೀಸಲಾತಿ ನೀಡಿರುವುದರಿಂದ ಬಿಜೆಪಿ ಸೋಲು ಕಂಡಿದೆ ಎಂದು ಪಕ್ಷದ ಶಾಸಕರು, ಮಾಜಿ ಸಚಿವರು ಹೇಳಿಕೆ ನೀಡುವ ಮೂಲಕ ಮಾದಿಗ ಸಮುದಾಯವನ್ನು ಅವಮಾನಿಸುತ್ತಿರುವುದು ಸರಿಯಲ್ಲ ಎಂದು ಕರ್ನಾಟಕ ರಾಜ್ಯ ಸ್ವಾಭಿಮಾನಿ ಮಾದಿಗ ವೇದಿಕೆ ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾದಿಗ ಸಮಾಜದ ಮುಖಂಡ ಹನುಮಂತಪ್ಪ ಮಾತನಾಡಿ, ದುರಾಡಳಿತದಿಂದ ಬಿಜೆಪಿ ಸೋಲು ಕಂಡಿದೆ. ಇದನ್ನು ಸಮರ್ಥಿಸಿಕೊಳ್ಳಲು ರಾಜ್ಯದಲ್ಲಿ ಒಳ ಮೀಸಲಾತಿಯಿಂದ ಬಿಜೆಪಿ ಸೋತಿದೆ ಎಂದು ಸಭೆಗಳಲ್ಲಿ, ಮಾಧ್ಯಮದವರ ಮುಂದೆ ಹೇಳಿಕೊಳ್ಳುತ್ತಾ ಮಾದಿಗ ಸಮಾಜವನ್ನು ಹೀಯಾಳಿಸುವುದು ಖಂಡನೀಯ ಎಂದರು.

ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ, ಹೊನ್ನಾಳಿ ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರು ಮತ್ತೆ ಒಳಮೀಸಲಾತಿಯಿಂದ ಹೀನಾಯವಾಗಿ ಸೋಲಬೇಕಾಯಿತು ಎಂದು ಹೇಳಿಕೆ ನೀಡುತ್ತಿದ್ದಾರೆ. ಸದಾಶಿವ ಆಯೋಗದ ವರದಿ ಜಾರಿಗೆ ಪ್ರತಿಭಟನೆ ನಡೆಸಿದರೂ ಈ ಬಗ್ಗೆ ಗಮನಹರಿಸದ ಬಿಜೆಪಿ, ಅವೈಜ್ಞಾನಿಕ ಸಮಿತಿ ರಚಿಸಿಕೊಂಡು ವರದಿ ತಿರುಚಿ ಕೇಂದ್ರಕ್ಕೆ ಕಳುಹಿಸಿರುವುದು ಚುನಾವಣೆ ಗಿಮಿಕ್. ಇದರಿಂದ ಒಳಮೀಸಲಾತಿಗೆ ಯಾವುದೇ ಪ್ರಯೋಜನವಾಗದು ಎಂದು ಹೇಳಿದರು.

ಬಿಜೆಪಿ ಶಾಸಕರು, ಮಾಜಿ ಸಚಿವರು ಮಾದಿಗ ಸಮಾಜವನ್ನು ಅವಮಾನಿಸುವುದನ್ನು ಕೈಬಿಡಬೇಕು. ಮಾದಿಗ ಸಮಾಜದ ಬಗ್ಗೆ ಮಾತನಾಡುವ ಮೊದಲು, ಐಪಿಎಸ್ ಅಧಿಕಾರಿ ಎಂ. ನಂಜುಂಡಸ್ವಾಮಿ ಬರೆದಿರುವ ಹೊಲೆಯರು, ಮಾದರು, ರಾಜರು ಎನ್ನುವ ಪುಸ್ತಕವನ್ನು ಓದಿ ಮಾದಿಗ ಸಮುದಾಯದವರು ಯಾರು ಎಂದು ತಿಳಿದುಕೊಳ್ಳಲಿ ಎಂದರು.

ಮಾದಿಗ ಸಮುದಾಯದ ಬಗೆಗಿನ ಹೇಳಿಕೆ ಮತ್ತೆ ಪುನರಾವರ್ತನೆಯಾದರೆ, ಬಿಜೆಪಿಯ ಅವೈಜ್ಞಾನಿಕ ವರದಿಯ ಬಗ್ಗೆ ಸಮುದಾಯಕ್ಕೆ ತಿಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಸಮಾದಪ್ಪ, ತಿಪ್ಪೇರುದ್ರಪ್ಪ, ಆವರಗೆರೆ ಎಂ. ಚಂದ್ರಪ್ಪ ಕೊಪ್ಪದ್, ನಾಗರಾಜ್ ಉಪಸ್ಥಿತರಿದ್ದರು.

# ಹರಪನಹಳ್ಳಿ : ನಾಗರತ್ನ ಹೊಸಮನಿಗೆ ಬೀಳ್ಕೊಡುಗೆ





ಹರಪನಹಳ್ಳಿ, ಜು. 3 - ಗ್ರಂಥಪಾಲಕರಾಗಿ ಸುದೀರ್ಘ 36 ವರ್ಷಗಳ ಕಾಲ ಸೇವೆ ಮಾಡಿ ನಿವೃತ್ತಿಯಾಗಿರುವ ನಾಗರತ್ನ ಹೊಸಮನಿಯವರ ಸೇವೆ ಅಮೋಘವಾದುದು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎಸ್. ಷಣ್ಮುಖನಗೌಡ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೊಸದುರ್ಗ, ಮಾಯಕೊಂಡ ಹಾಗೂ ಹರಪನಹಳ್ಳಿಗಳಲ್ಲಿ 6 ವರ್ಷಗಳ ಕಾಲ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿ ಇಂದು ನಿವೃತ್ತಿಯಾಗಿದ್ದು, ಅವರ ಮುಂದಿನ ನಿವೃತ್ತಿ ಜೀವನ ಉತ್ತಮವಾಗಿರಲಿ ಎಂದು ಶುಭ ಹಾರೈಸಿದರು. ದೈಹಿಕ-ಶಿಕ್ಷಣ ನಿರ್ದೇಶಕ ಎಚ್. ಕೊಟ್ರೇಶ ಪ್ರಭಾರಿ ಗ್ರಂಥಪಾಲಕರಾಗಿ ಅಧಿಕಾರ ವಹಿಸಿ ಕೊಂಡರು.

ಉಪನ್ಯಾಸಕರಾದ ಎನ್.ಎಂ. ನಾಗರಾಜ, ಡಾ. ತಿಪ್ಪೇಸ್ವಾಮಿ, ಡಾ.ಕೆ. ಸತೀಶ, ವ್ಯವಸ್ಥಾಪಕರಾದ ಸುನೀತ, ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಿಶೇಷ ರೀತಿಯಲ್ಲಿ ಕನ್ನಡ ಪರ ಹೋರಾಟಗಾರನ ಹುಟ್ಟುಹಬ್ಬ





ದಾವಣಗೆರೆ, ಜು.3- ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕನ್ನಡ ಪರ ಹೋರಾಟಗಾರ ಟಿ. ಶಿವಕುಮಾರ್ ಅವರ 67ನೇ ಹುಟ್ಟುಹಬ್ಬದ ಪ್ರಯುಕ್ತ ಅವರ ಸುಪುತ್ರ ಶಿವರತನ್ ಹಾಗೂ ಕನ್ನಡಪರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು, ಉತ್ತರ ಭಾರತದಿಂದ ವಿದ್ಯಾಭ್ಯಾಸಕ್ಕೆಂದು ನಗರಕ್ಕೆ ಬಂದಿರುವ ಹಿಂದಿ ಭಾಷೆ ಮಾತನಾಡುವ ವೈದ್ಯಕೀಯ ವಿದ್ಯಾರ್ಥಿ ಗಳಿಗೆ ಕನ್ನಡ ಕಲಿಕೆಯ ಪುಸ್ತಕಗಳನ್ನು ಉಡುಗೊರೆಯಾಗಿ ಕೊಟ್ಟು, ಕನ್ನಡ ಕಲಿತು ಸಂಭಾಷಣೆ ಮಾಡಿ ಎಂದು ಮನವಿ ಮಾಡಿ, ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಮುಖ್ಯಸ್ಥ ಎಸ್.ಜಿ. ಸೋಮಶೇಖರ್, ಶಾಮ್‌ಸುಂದರ್, ದಾ.ಹ. ಶಿವಕುಮಾರ್ ಮತ್ತಿತರರಿದ್ದರು.

# ಮಾಜಿ ಸಂಸದ ಧ್ರುವನಾರಾಯಣ ನೆನೆದು ಕಣ್ಣೀರಿಟ್ಟ ಡಿಕೆಶಿ

ಬೆಂಗಳೂರು, ಜು. 3- ಲೋಕಸಭಾ ಮಾಜಿ ಸದಸ್ಯರು, ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ದಿ. ಧ್ರುವನಾರಾಯಣ ಅವರನ್ನು ನೆನೆದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನಸಭೆಯಲ್ಲಿ ಕಣ್ಣೀರಿಟ್ಟರು.

ವಿಧಾನಮಂಡಲ ಅಧಿವೇಶನದ ಮೊದಲ ದಿನದ ಕಲಾಪದಲ್ಲಿ, ಇತ್ತೀಚೆಗೆ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸುವ ಸಂದರ್ಭದಲ್ಲಿ ಮಾತನಾಡಿದ ಶಿವಕುಮಾರ್ ಅವರು, ಧ್ರುವನಾರಾಯಣ ಅವರ ಜತೆಗಿನ ಒಡನಾಟ, ಅವರ ಕೆಲಸದ ವೈಖರಿಯನ್ನು ನೆನೆದು ಭಾವುಕರಾದರು.

ಸಹೋದರನಂತಿದ್ದ ಧ್ರುವನಾರಾಯಣ ಅವರ ಅಗಲಿಕೆ ನನ್ನ ಮನಸ್ಸಿಗೆ ಬಹಳ ನೋವು ತಂದಿದೆ. ನನಗೆ ರಾಜಕಾರಣದಲ್ಲಿ ಧ್ರುವನಾರಾಯಣ್ ಸಹೋದರನಾಗಿದ್ದ ಎಂದರು.

ಧ್ರುವನಾರಾಯಣ್ ಅವರು ನನ್ನ ಜತೆ ಕಾರ್ಯಾಧ್ಯಕ್ಷರಾಗಿದ್ದರು. ಅವರಿಗೆ ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ ಜಿಲ್ಲಾ ಜವಾಬ್ದಾರಿ ವಹಿಸಿದ್ದೆ. ಈ ಎಲ್ಲಾ ಕಡೆಗಳಲ್ಲಿ ಅವರು ಶುದ್ಧ ರಾಜಕಾರಣ ಮಾಡಿದ್ದಾರೆ. ಅವರಿಗೆ ವಹಿಸಿದ್ದ ಪ್ರದೇಶದಲ್ಲಿ ಸುಮಾರು 75% ರಷ್ಟು ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ ಎಂದು ತಿಳಿಸಿದರು.

# ಪ್ರಧಾನಿ ವಿರುದ್ಧ ಆಕ್ಷೇಪಾರ್ಹ ಮಾತು, ಕಾಂಗ್ರೆಸ್ ಶಾಸಕನ ವಿರುದ್ಧ ಪ್ರಕರಣ

ವಿದಿಶಾ, ಜು. 3 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಮಧ್ಯಪ್ರದೇಶದ ಕಾಂಗ್ರೆಸ್ ಶಾಸಕ ಶಶಾಂತ್ ಭಾರ್ಗವ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಸುದ್ದಿ ವಾಹಿನಿಯೊಂದರಲ್ಲಿ ನಡೆದ ಚರ್ಚೆಯಲ್ಲಿ ಶಾಸಕ ಭಾರ್ಗವ ಪಾಲ್ಗೊಂಡಿದ್ದರು. ಆಗ ಮೋದಿ ಪರ ಬಿಜೆಪಿ ಬೆಂಬಲಿಗರು ಘೋಷಣೆ ಕೂಗುತ್ತಿರುವಾಗ ಶಾಸಕ ಅಸಭ್ಯ ಪದ ಬಳಸಿದ್ದರು. ನಂತರ ಬಿಜೆಪಿ ಪದಾಧಿಕಾರಿ ಪಂಕಜ್ ಪಾಂಡೆ ಅವರು ದೂರು ದಾಖಲಿಸಿದ್ದರು. ಆರೋಪ ತಳ್ಳಿ ಹಾಕಿರುವ ಭಾರ್ಗವ, ಗದ್ದಲ ತಡೆಯಲು ಕೆಲ ಪದಗಳನ್ನು ಬಳಸಿದ್ದೆ. ಯಾವುದೇ ಆಕ್ಷೇಪಾರ್ಹ ಪದ ಬಳಸದೇ ಇದ್ದರೂ ಸಹ, ಮಾಧ್ಯಮಗಳ ಮೂಲಕ ಪ್ರಧಾನಿಗೆ ಕ್ಷಮೆ ಕೇಳಿದ್ದೇನೆ ಎಂದು ಹೇಳಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆಯಲ್ಲಿ 35x48 ದಕ್ಷಿಣ, ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ ಅಕ್ಕ-ಪಕ್ಕ. 40x45 ಪೂರ್ವ. ಡಾಲರ್ಸ್ ಕಾಲೋನಿಯಲ್ಲಿ 35x40 ಉತ್ತರ ಅಕ್ಕ-ಪಕ್ಕ. 40x60 ಉತ್ತರ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 35x60 ಪೂರ್ವ-ಉತ್ತರ ಕಾರ್ನರ್ 30x43 ಪೂರ್ವ, 40x60 ಪಶ್ಚಿಮ, ಜೆ.ಹೆಚ್ ಪಟೇಲ್ ಬಡಾವಣೆಯ ಪೋದಾರ್ ಸ್ಕೂಲ್ ಸುತ್ತ-ಮುತ್ತ ಹೊಸ ಬಡಾವಣೆಯಲ್ಲಿ 30x50 ಪೂರ್ವ 60 ಅಡಿ ರಸ್ತೆಗೆ ಹೊಂದಿಕೊಂಡು ಅಕ್ಕ-ಪಕ್ಕ, 30x40 ಪಶ್ಚಿಮ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**ಮನೆಯಲ್ಲಿ ನೀರಿನ ಲೀಕೇಜ್**
ಯಾವುದೇ ರೀತಿಯ ಮನೆಯ ಒಳಗಡೆ ಮತ್ತು ಹೊರಗಡೆಯಿಂದ ಮನೆಯ ಒಳಗಡೆ ನೀರು ಸೋರುತ್ತಿದ್ದರೆ (ಲೀಕೇಜ್) ಶಾಶ್ವತವಾಗಿ ನಿಲ್ಲಿಸಲಾಗುವುದು ಮತ್ತು 100% ಕೆಲಸದ ಗ್ಯಾರಂಟಿ ಇರುತ್ತದೆ.
96065 57066, 95913 10082

**ಮನೆ ಮಾರಾಟಕ್ಕಿದೆ**
3 ರೂಂ ಡುಪ್ಲೆಕ್ಸ್ 1 ರೂಂ ಎಸಿ 2 ರೂಂ, 2 ಮನೆ, 3 1/2 ಚ.ಅಡಿ 1 ಮನೆ, 2 ರೂಂ 1 ಮನೆ, ಹಗೇದಿಬ್ಬ ಸರ್ಕಲ್, ಕುಂಬಾರ ಪೇಟೆ, ದಾವಣಗೆರೆ.
94497 68564

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಬೇಕಾಗಿದ್ದಾರೆ**
ವಾರ್ಡ್ ಬಾಯ್ಸ್ ಮತ್ತು ಆಯಾ ಕೆಲಸಕ್ಕೆ ಬೇಕಾಗಿದ್ದಾರೆ.
ಸಮರ್ಥ ಸಲ್ಯೂಷನ್ಸ್ ಮತ್ತು ಸರ್ವೀಸ್
ಕೆಲಸದ ಅವಧಿ : 8 ಗಂಟೆಗಳು.
ಆಕರ್ಷಕ ಸಂಬಳದೊಂದಿಗೆ ESI-PF ಸೌಲಭ್ಯವಿದೆ.
9986088996

**ಸೈಟು ಮಾರಾಟಕ್ಕಿದೆ**
ಹಳೆ ಕುಂದುವಾಡದ ಸರ್ಕಾರಿ ಹೈಸ್ಕೂಲ್ ಹಿಂಭಾಗ 40×50 ವಿಸ್ತೀರ್ಣದ ಪಶ್ಚಿಮ-ದಕ್ಷಿಣ ಕಾರ್ನರ್ ಸೈಟ್ ಮಾರಾಟಕ್ಕಿರುತ್ತದೆ.
97432 09680

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**ಮಳಿಗೆಗಳು ಬಾಡಿಗೆ ಇವೆ**
ಜಿಲ್ಲಾ ಕ್ರೀಡಾಂಗಣದ ಹತ್ತಿರ ಒಂದನೇ ಮಹಡಿಯಲ್ಲಿ 10 ಅಡಿx25 ಅಡಿ ಅಳತೆಯ ಒಂದು ಮಳಿಗೆ ಮತ್ತು 2ನೇ ಮಹಡಿಯಲ್ಲಿ 25 ಅಡಿx25 ಅಡಿ ಅಳತೆಯ ಒಂದು ಮಳಿಗೆ ಬಾಡಿಗೆ ಇದೆ. ಸಂಪರ್ಕಿಸಿ :
94498 30566

**EC / ಇಸಿ, E-swathu, Khatha Change Building Licence & Other Property Documents**
96118-66449

**2 BHK HOUSE FOR RENT/ LEASE**
Near Podar international in J.H. Patel Badavane, Davangere.
95358 41058, 88617 11072

**ಬೇಕಾಗಿದ್ದಾರೆ**
ತಕ್ಷಣ ಸೇಲ್ಸ್ ಗರ್ಲ್ಸ್, ಸೇಲ್ಸ್ ಬಾಯ್ಸ್ ಹಾಗೂ ಹೆಲ್ಪರ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ಸ್ ಸ್ಯಾರಿ ಸೆಂಟರ್, ಬಿನ್ನಿ ಕಂಪನಿ ರೋಡ್, ದಾವಣಗೆರೆ -1.

**FREE TALLY ಮತ್ತು DATA ENTRY**
ಕಲಿಸಲಾಗುವುದು (ಮಹಿಳೆಯರಿಗೆ ಮಾತ್ರ) Direct Admission
ಮೊ : 91081 85926

**WANTED**
Banking Sector Tele Caller (Female Only)
Qualification : Any Degree
90715 55081
Interview time : 11AM

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೋರಿಯರ್ ಸೌಲಭ್ಯವಿದೆ)
91487 33213

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಲಕ್ಷ್ಮಿ ಗ್ಯಾಸ್ ಏಜೆನ್ಸಿ
ಓಲ್ಡ್ ಪಿ.ಬಿ. ರೋಡ್, ಹರಿಹರ - 577601.
ಫೋ. : 08192 240125
78992 02555

**ಹೋಟೆಲ್ ಗಾಡಿ ಬಾಡಿಗೆಗೆ ಇದೆ**
ಸಂಪರ್ಕಿಸಿ :
90080 92650

**ಲೋನ್ ಕೊಡಲಾಗುವುದು**
ಗೃಹ ಸಾಲ, ನಿವೇಶನ ಸಾಲ, ವ್ಯಯಕ್ತಿಕ ಸಾಲ, ವ್ಯಾಪಾರ ಸಾಲ, ಮನೆ ಖರೀದಿ ಮತ್ತು ರಿಪೇರಿ ಸಾಲ ಕೊಡಲಾಗುವುದು, ನಮೂನೆ -9.11A.11B no 3 ಕ್ಕೂ ಸಾಲ ಸೌಲಭ್ಯವಿದೆ. ಮಾಹಿತಿಗೆ ಸಂಪರ್ಕಿಸಿ
74835 24662

**Immediately wanted Teachers**
B.Sc B.Ed- 03 Posts. PCM / CBZ, Contact
95356 10817

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 81478 03755

**ಅಡಿಕೆ ಸಸಿಗಳಿಗಾಗಿ ಸಂಪರ್ಕಿಸಿರಿ**
ಫೋ. :99866 17127

**2 BHK HOUSE FOR RENT/LEASE**
near podar international in J.H. Patel Badavane, Davangere.
95358 41058

**WANTED**
Computer Hardware Engineers (Vacancy 4 Nos. (15.20K) Freshers Welcome
VIZION COMPUTERS
Send Resume to Whatsapp
98860 94900

**ಮನೆ ಬಾಡಿಗೆಗೆ ಇದೆ**
House For Rent
(2 BHK-Semi Furnished) 2nd main Kalidas Nagar, Harihar.
91774 21966

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**PATEL COACHING CENTER**
for PUC Science & Para-medical students Tution Classes are available.
Place-Beside SBI ATM Ram & Co Circle, Davangere.
9380322328
New Batch is Starting Soon

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.5.7.2023ರ ಬುಧವಾರ
ದಿ.6.7.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಅಡಿಕೆ ಸಸಿಗಳು ಕೈದಾಳ್‌ಲ್ಲಿ ಮಾರಾಟಕ್ಕಿವೆ**
ಚಿತ್ರಹಳ್ಳಿ ಗೋಟಿನ ಉತ್ತಮ ಅಡಿಕೆ ಸಸಿಗಳು ಕೈದಾಳ್ ಹತ್ತಿರದ ತೋಟದಲ್ಲಿ ಮಾರಾಟಕ್ಕಿವೆ.
2 kg Packet: Rs 24/-
98807 39392, 98807 43838

**ತರಬೇತಿ**
ಬ್ಯೂಟಿಷಿಯನ್, ಟೈಲರಿಂಗ್, ಫ್ಯಾಷನ್ ಡಿಸೈನರ್, ಹ್ಯಾಂಡ್ ಎಂಬ್ರಾಯ್ಡರಿ ಮತ್ತು ಅನೇಕ ಕೋರ್ಸ್‌ಗಳ ತರಬೇತಿ ಕೊಡಲಾಗುತ್ತದೆ. ಕಲಿಯಲು ಆಸಕ್ತಿಯುಳ್ಳವರು ಸಂಪರ್ಕಿಸಿ:
81518 72582

**AVOID MOSQUITOES**
Mosquito Nets For Doors & Windows
SRI GOWRI ENTERPRISES
#7C2, 4th Cross, Near, Shaneshwara Temple Karur Industrial-Area, P.B. Road, DVG-6.
72049 94628

**ನಂ.1. ವಶೀಕರಣಂ**
ಕನ್ನಡ, ತೆಲುಗು, ಹಿಂದಿ ಭಾಷೆಯಲ್ಲಿ ಭವಿಷ್ಯ, ಸ್ತ್ರೀ-ಪುರುಷರ ಎಲ್ಲಾ ರೀತಿಯ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಶ್ರೀ ಲಕ್ಷ್ಮಿಕಾಂತ್ ಗುರೂಜಿ, ಆಂಧ್ರಪ್ರದೇಶ
ಲಾಯರ್ ರಸ್ತೆ, ದಾವಣಗೆರೆ.
9740064163

**TEACHERS WANTED**
Hindi teacher - 1
Maths teacher -1
Ph: 6361662669

**WANTED**
S.V Marekting Davangere, P.B road, Harihara Road, Vinobhanagar, 4th Main
Sales and Collection Boy
ಸೇಲ್ಸ್ ಮತ್ತು ಕಲೆಕ್ಷನ್ ಹುಡುಗರು ಬೇಕಾಗಿದ್ದಾರೆ.
94480 46571, 78993 37571

**SHOP FOR RENT**
MCC Block, Mama's joint road And Boys hostel road
82177 72482

**ಬೇಕಾಗಿದ್ದಾರೆ**
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮಲ್ಲೇ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ/ ವಿಚ್ಛೇದಿತೆಯರು ಹೋಂ. ನರ್ಸಿಂಗ್ ಕೆಲಸಕ್ಕಾಗಿ ಬೇಕಾಗಿದ್ದಾರೆ. ಸಂಬಳ 12,000 ರಿಂದ 18.000 (ಉಚಿತ ಊಟ, ವಸತಿ ಸೌಲಭ್ಯವಿದೆ)
81979 30800, 63661 41518

**ಬೇಕಾಗಿದ್ದಾರೆ**
ಇವೆಂಟ್ ಮ್ಯಾನೇಜ್‌ಮೆಂಟ್‌ನಲ್ಲಿ ಕೆಲಸ ಮಾಡಲು ಆಸಕ್ತಿ ಇರುವ ಯುವಕ, ಯುವತಿಯರು ಬೇಕಾಗಿದ್ದಾರೆ. ಡಿಗ್ರಿ ಪಾಸ್/ಫೇಲ್ ಸಂಬಳ : 20,000 ದಿಂದ 1,00,000ದವರೆಗೆ. ಸಂಪರ್ಕಿಸಿ.
ಎಸ್.ಎಸ್. ಇವೆಂಟ್ಸ್
96068 50128

**WE ARE HIRING!!**
Looking for people with minimum digital knowledge for our company. Salary upto 10,000-20,000. Interested people do contact :
Ph: 77602 57006

**ಹೊಸ ಮನೆ ಮಾರಾಟಕ್ಕಿದೆ**
30x40 ಸೈಜ್, ಉತ್ತರ ದಿಕ್ಕಿನ ಸೈಟ್‌ನಲ್ಲಿ 2 BHK ಮನೆ ಸಿದ್ದಗಂಗಾ ಲೇಔಟ್, ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಹಿಂಭಾಗ, ದಾವಣಗೆರೆ.
95384 86666, 63605 94165

**ಮನೆ ಮಾರಾಟಕ್ಕಿದೆ**
ನೂತನವಾಗಿ ನಿರ್ಮಿಸಿರುವ ಉತ್ತರ ದಿಕ್ಕಿನ 20x35 ಮನೆ ಮಾರಾಟಕ್ಕಿದೆ. ಸ್ಥಳ : ಡಾಕ್ಟರ್ ಲೇಔಟ್, ಎಸ್. ಎಸ್. ಹೈಟೆಕ್ ರೋಡ್, ನಿಸರ್ಗ ಕಾನ್ವೆಂಟ್ ಪಕ್ಕ. ಸಂಪರ್ಕಿಸಿ :
78995 50339

# ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಯಜ್ಞಮಾತೆ ಆದಿದೇವಿ ಜಗದಂಬಾ ಸ್ಮೃತಿ ದಿನ




ದಾವಣಗೆರೆ, ಜು. 3- ದೊಡ್ಡಬಾತಿಯ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಸಂಸ್ಥೆಯ ಯಜ್ಞಮಾತೆ ಆದಿದೇವಿ ಜಗದಂಬಾರವರ ಸ್ಮೃತಿ ದಿನ ಕಾರ್ಯಕ್ರಮವನ್ನು ಆಚರಿಸಲಾಯಿತು.

ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ದೊಡ್ಡಬಾತಿ ತಪೋವನದ ಅಧ್ಯಕ್ಷ ಡಾ. ಶಶಿಕುಮಾರ್ ಮೆಹರ್ವಾಡೆ, ಗ್ರಾ.ಪಂ. ಅಧ್ಯಕ್ಷ ಕೆ.ಜಿ. ಉಮೇಶ್, ಮಾಜಿ ಅಧ್ಯಕ್ಷ ಶಿವಕುಮಾರ್, ಸದಸ್ಯರಾದ ಡಿ.ಆರ್. ವೀರೇಶ್, ಭಾನುವಳ್ಳಿ ಸಿದ್ದಣ್ಣ, ವಿಎಸ್‌ಎಸ್‌ಎನ್ ಸರಸ್ವತಿ ಶಾಲೆಯ ಅಧ್ಯಕ್ಷ ನಾಗರಾಜ್, ರೇವಣ್ಣ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬ್ರಹ್ಮಾಕುಮಾರಿ ಸಂಭ್ರಮ ಕಾರ್ಯಕ್ರಮ ನಿರೂಪಿಸಿದರು. ಈಶ್ವರೀಯ ವಿಶ್ವವಿದ್ಯಾಲಯದ ದೊಡ್ಡಬಾತಿ ಶಾಖೆ ಸಂಚಾಲಕರಾದ ಬ್ರಹ್ಮಾಕುಮಾರಿ ಗೌರಕ್ಕ ಸ್ವಾಗತಸಿದರು. ಬ್ರಹ್ಮಾಕುಮಾರಿ ದೇವಿಕಾ ವಂದಿಸಿದರು.

# ಬಿಟ್‌ಕಾಯಿನ್ ಹಗರಣದ ಮರು ತನಿಖೆಗೆ ಆದೇಶ

ಬೆಂಗಳೂರು, ಜು. 3 - ಬಿಜೆಪಿ ಕಾಲದಲ್ಲಿ ನಡೆದ ಬಿಟ್ ಕಾಯಿನ್ ಹಗರಣದ ವಿರುದ್ಧ ಮರು ತನಿಖೆಗೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ತನಿಖೆಗೆ ಎಸ್‌ಐಟಿ ರಚನೆ ಮಾಡಲಾಗಿದ್ದು, ತನಿಖೆ ಮಂಗಳವಾರದಿಂದಲೇ ಪ್ರಾರಂಭಗೊಳ್ಳಲಿದೆ.

ಸಿಐಡಿ ಎಡಿಜಿಪಿ ಮನೀಶ್ ಕರ್ಬೀಕರ್ ನೇತೃತ್ವದಲ್ಲಿ ಈಗಾಗಲೇ ಎಸ್‌ಐಟಿಯನ್ನು ರಚನೆ ಮಾಡಲಾಗಿದೆ. ಸಿಐಡಿ ಸೈಬರ್ ಸೆಲ್‌ನ ಎಸ್ಪಿ ಶರತ್ ಪ್ರಕರಣದ ತನಿಖಾಧಿಕಾರಿಯಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಈ ಬಿಟ್ ಕಾಯಿನ್ ಹಗರಣವನ್ನು ಈ ಹಿಂದೆ ಸಿಸಿಬಿ ತನಿಖೆ ಮಾಡಿತ್ತು. ಆಗ ತನಿಖೆಯಲ್ಲಿ ಹಗರಣ ನಡೆದಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು.

# ವಿದ್ಯಾರ್ಥಿಯೂ ಉತ್ತಮ ಶಿಕ್ಷಕನನ್ನು ರೂಪಿಸಲು ಸಾಧ್ಯ

## ಉಳ್ಳಾಲದಲ್ಲಿ ಜೆಜೆಎಂಎಂಸಿ ಗೈನಕಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಶುಕ್ಲ ಎಸ್. ಶೆಟ್ಟಿ



**ವೈದ್ಯಕೀಯ ರಂಗದಲ್ಲಿ ವಿಶೇಷ ಸೇವೆ ಸಲ್ಲಿಸುತ್ತಿರುವ ದಾವಣಗೆರೆಯ ಜೆಜೆಎಂ ಕಾಲೇಜು ಆರ್ಥೋಡೆಕ್ಸ್ ಗೈನಕಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಶುಕ್ಲ ಎಸ್. ಶೆಟ್ಟಿ ಅವರೂ ಸೇರಿದಂತೆ ನಾಲ್ವರಿಗೆ ಗೌರವ**

ಉಳ್ಳಾಲ, ಜು. 3- ಉತ್ತಮ ಶಿಕ್ಷಕ, ಉತ್ತಮ ವಿದ್ಯಾರ್ಥಿಯನ್ನು ಬೆಳೆಸಲು ಸಾಧ್ಯವಾದಲ್ಲಿ, ಉತ್ತಮ ವಿದ್ಯಾರ್ಥಿಯೂ ಉತ್ತಮ ಶಿಕ್ಷಕನನ್ನು ರೂಪಿಸಲು ಸಾಧ್ಯ ಎಂದು ದಾವಣಗೆರೆಯ ಜೆಜೆಎಂ ಕಾಲೇಜು ಆರ್ಥಡೆಕ್ಸ್ ಗೈನಕಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಶುಕ್ಲ ಎಸ್. ಶೆಟ್ಟಿ ಅಭಿಪ್ರಾಯಿಸಿದರು.

ಉಳ್ಳಾಲದ ದೇರಳಕಟ್ಟೆ ಜಸ್ಟೀಸ್ ಕೆ. ಎಸ್ ಹೆಗ್ಡೆ ಚಾರಿಟಬಲ್ ಆಸ್ಪತ್ರೆ ವತಿಯಿಂದ ಆವಿಷ್ಕಾರ ಸಭಾಂಗಣದಲ್ಲಿ ಜರುಗಿದ ವೈದ್ಯರ ದಿನಾಚರಣೆ ಪ್ರಯುಕ್ತ ವೈದ್ಯಕೀಯ ಸೇವೆಯಲ್ಲಿ ಹಲವು ವರ್ಷಗಳಿಂದ ಸೇವೆಗೈದ ಹಿರಿಯ ವೈದ್ಯರಿಗೆ ಸನ್ಮಾನಿಸಲಾಯಿತು. ಈ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಪ್ರತಿದಿನ ನಾವೀನ್ಯತೆಗಳು ಎದುರಾಗುವುದರಿಂದ, ಕಿರಿಯ ವೈದ್ಯರು ಹಿರಿಯ ವೈದ್ಯರೊಂದಿಗಿನ ಚರ್ಚೆಯಲ್ಲಿ ಭಾಗವಹಿಸುವುದರಿಂದ ಕ್ಷೇತ್ರದಲ್ಲಿ ಹೆಚ್ಚಿನ ಬದಲಾವಣೆ ಸಾಧ್ಯ. ಆ ಮೂಲಕ ರೋಗಿಗಳ ಸೇವೆಯಲ್ಲಿ ಗುಣಾತ್ಮಕತೆ ಕಾಣಬಹುದು ಎಂದು ಅವರು ಅಭಿಪ್ರಾಯಿಸಿದರು.

ಹಿರಿಯ ವೈದ್ಯರನ್ನು ಸನ್ಮಾನಿಸಿ ಮಾತನಾಡಿದ ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಾಧಿಪತಿ ಎನ್. ವಿನಯ್ ಹೆಗ್ಡೆ, ಬಡ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರ ಉತ್ತಮ ಸೇವೆಯನ್ನು ಬಯಸುತ್ತಾರೆ. ಕೋವಿಡ್ ಸಂದರ್ಭ ಬಹಳಷ್ಟು ಜನ ಆರ್ಥಿಕ ತೊಂದರೆಯಿಂದ ನೋವು ಅನುಭವಿಸುವಂತಾಯಿತು. ಹಣ ಮುಖ್ಯವಾಗಿದ್ದರೂ ಸೇವೆಗೆ ಪ್ರಾಮುಖ್ಯತೆ ನೀಡುವುದು ವೈದ್ಯರಾದವರ ಗುಣವಾಗಬೇಕು ಎಂದು ಕಿವಿಮಾತು ಹೇಳಿದರು.

ನಿಟ್ಟೆ ವಿವಿ ಸಹಕುಲಾಧಿಪತಿ ಡಾ.ಎಂ. ಶಾಂತಾರಾಮ ಶೆಟ್ಟಿ ಮಾತನಾಡಿ, ಡಾ. ಬಿ.ಸಿ. ರಾಯ್ ಹುಟ್ಟುಹಬ್ಬವನ್ನು ಆಚರಿಸುವ ಸಲುವಾಗಿ ವೈದ್ಯರ ದಿನಾಚರಣೆಯಲ್ಲ. ಅವರು ಮುಖ್ಯಮಂತ್ರಿಯಾಗಿ, ಭಾರತ ರತ್ನ ಪಡೆದವರಾದ ಏಕೈಕ ವೈದ್ಯ. ಈ ನಿಟ್ಟಿನಲ್ಲಿ ವೈದ್ಯನಾದವನು ಏನು ಮಾಡಬಹುದು ಅನ್ನುವುದನ್ನು ತೋರಿಸಿದ ವ್ಯಕ್ತಿತ್ವದ ಆಚರಣೆಯಾಗಿದೆ. ಅಂತಹ ಶ್ರೇಷ್ಠ ದಿನದಂದು ಹಣವೇ ಮುಖ್ಯವಲ್ಲ, ರೋಗಿಗಳ ಆರೈಕೆ ಮುಖ್ಯ ಎನ್ನುವ ಉದ್ದೇಶದಿಂದ ಕಾರ್ಯಾಚರಿಸಿದ ವೈದ್ಯರನ್ನು ಗೌರವಿಸಲಾಗಿದೆ ಎಂದರು.

ವೈದ್ಯಕೀಯ ರಂಗದಲ್ಲಿ ವಿಶೇಷ ಸೇವೆ ಸಲ್ಲಿಸಿದ ದಾವಣಗೆರೆಯ ಜೆಜೆಎಂ ಕಾಲೇಜು ಆರ್ಥಡೆಕ್ಸ್ ಗೈನಕಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಶುಕ್ಲ ಎಸ್. ಶೆಟ್ಟಿ, ಬೆಳ್ತಂಗಡಿ ಉಜಿರೆಯ ಫಿಜಿಷಿಯನ್ ಡಾ. ಎನ್.ಬಾಲಕೃಷ್ಣ ಭಟ್, ಮಂಜೇಶ್ವರದ ಫಿಜಿಷಿಯನ್ ಡಾ.ಎಂ.ಜಯಪಾಲ್ ಶೆಟ್ಟಿ, ಉಳ್ಳಾಲದ ಫಿಜಿಷಿಯನ್ ಡಾ.ಎಂ. ಸದಾಶಿವ್ ಪೊಳ್ನಾಯ ಇವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕುಲಪತಿ ಡಾ. ಎಂ.ಎಸ್ ಮೂಡಿತ್ತಾಯ, ಸೇವಾ ವಿಭಾಗದ ಸಿಆರ್‌ಎಲ್‌ಎಂನ ಉಪಾಧ್ಯಕ್ಷ ಡಾ.ಸತೀಶ್ ಕುಮಾರ್ ಭಂಡಾರಿ, ಕುಲಸಚಿವ ಡಾ. ಹರ್ಷ ಹಾಲಹಳ್ಳಿ, ವೈಸ್ ಡೀನ್ ಅಮೃತ್ ಮಿರಜ್‌ಕರ್ ಉಪಸ್ಥಿತರಿದ್ದರು.

ಡಾ.ಲಕ್ಷ್ಮಿ ಮಂಜೀರಾ ಎನ್., ಡಾ. ಸಂದೀಪ್ ರೈ, ಡಾ.ಅಭಿಜಿತ್ ಶೆಟ್ಟಿ, ಡಾ.ಶ್ರೀನಿವಾಸ್ ಭಟ್ ಸನ್ಮಾನಿತರ ಪರಿಚಯ ಓದಿದರು.

ಡಾ.ಜಯಪ್ರಕಾಶ್ ಶೆಟ್ಟಿ ಸ್ವಾಗತಿಸಿದರು. ವೈದ್ಯಕೀಯ ಅಧೀಕ್ಷಕಿ ಡಾ. ಸುಮಲತಾ ಆರ್. ಶೆಟ್ಟಿ ವಂದಿಸಿದರು. ನಿಶಾ ಶೆಟ್ಟಿ ಮತ್ತು ಸ್ವಾತಿ ರಾವ್ ನಿರೂಪಿಸಿದರು

# ದೇವಾಂಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಜು. 3- ರಾಜ್ಯ ದೇವಾಂಗ ಸಂಘ ಹಾಗೂ ರಾಜ್ಯ ದೇವಾಂಗ ನೌಕರರ ಸಂಘದ ವತಿಯಿಂದ 2022-23 ಸಾಲಿನಲ್ಲಿ ಶೇ.90 ಕ್ಕೂ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ದೇವಾಂಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದ್ದು, ಇದೇ ದಿನಾಂಕ 7 ರೊಳಗಾಗಿ ರಾಜ್ಯ ಸಂಘದ ಆಡಳಿತ ಕಛೇರಿಗೆ ತಲುಪುವಂತೆ ಕಳಿಸಲು ರಾಜ್ಯಾಧ್ಯಕ್ಷ ರವೀಂದ್ರ ಕಲ್ಬುರ್ಗಿ ಮನವಿ ಮಾಡಿದ್ದಾರೆ.

ಅರ್ಜಿಗಳನ್ನು ಕರ್ನಾಟಕ ರಾಜ್ಯ ದೇವಾಂಗ ಸಂಘ, ಆಡಳಿತ ಕಛೇರಿ 59/ ಎ. 10 ನೇ ಎ ಕ್ರಾಸ್, ವೆಸ್ಟ್ ಆಫ್ ಕಾರ್ಡ್ ರಸ್ತೆ ನಾಗಪೂರ, ಮಹಾಲಕ್ಷ್ಮಿಪುರಂ (ರಾಜಾಜಿನಗರ ಮೆಟ್ರೊ ನಿಲ್ದಾಣದ ಸಮೀಪ) ಬೆಂಗಳೂರು 560086 ಇವರಿಗೆ ಕಳುಹಿಸಬಹುದು.

# ಪೊಲೀಸರ ಕ್ಷಿಪ್ರ ಕಾರ್ಯಾಚರಣೆ ಮೊಬೈಲ್ ಕಳ್ಳನ ಬಂಧನ



ದಾವಣಗೆರೆ, ಜು.3- ನಗರದ ಎಂಸಿಸಿ 'ಬಿ'ಬ್ಲಾಕ್‌ನಲ್ಲಿ ನಿನ್ನೆ ಸ್ಕೂಟರ್‌ನಲ್ಲಿ ಬಂದು, ಪಾದಚಾರಿಯೊಬ್ಬರ ಮೊಬೈಲನ್ನು ಕಿತ್ತುಕೊಂಡು ಹೋದ ವ್ಯಕ್ತಿಯನ್ನು ಬಡಾವಣೆ ಪೊಲೀಸರು ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಬಂಧಿಸಿದ್ದಾರೆ.

ಘಟನಾ ಸ್ಥಳಕ್ಕೆ ಭೇಟಿ ಮಾಡಿ ಸ್ಥಳದಲ್ಲಿ ಸಿಕ್ಕ ಸಿಸಿಟಿವಿ ದೃಶ್ಯಾವಳಿಗಳ ಆಧಾರದ ಮೇಲೆ ಆವರಗೆರೆ ವಾಸಿ ಎನ್ನಲಾದ ಎ. ನಿಂಗರಾಜ್ ಎಂಬಾತನ್ನು ದಸ್ತಗಿರಿ ಮಾಡಿ, ಕಿತ್ತುಕೊಂಡು ಹೋಗಿದ್ದ 10 ಸಾವಿರ ರೂ. ಮೌಲ್ಯದ ಮೊಬೈಲ್, ಕೃತ್ಯಕ್ಕೆ ಬಳಸಿದ ಸ್ಕೂಟರ್ ಅಂದಾಜು ಮೌಲ್ಯ 50,000/- ರೂ ಹಾಗೂ ಕೆಟಿಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿದ್ದ 20,000/- ರೂ. ಮೌಲ್ಯದ ಮೊಬೈಲ್ ಅಮಾನತ್ತು ಪಡಿಸಿಕೊಂಡು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಬಡಾವಣೆ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಧನಂಜಯ, ಸಿಬ್ಬಂದಿಗಳಾದ, ಸಿದ್ದೇಶ್, ಸೈಯದ್ ಅಲಿ, ಅರುಣ ಕುಮಾರ, ಹನುಮಂತಪ್ಪ ಸಿ, ಸೋಮಪ್ಪ, ಗೀತಾ ಹೆಚ್. ಇವರುಗಳು ಕ್ಷಿಪ್ರ ಕಾರ್ಯಾಚರಣೆ ನಡೆಸಿದ್ದಾರೆ.

# 'ಗ್ಯಾರಂಟಿ' : ಆಟೋ ಚಾಲಕರ ಪ್ರತಿಭಟನೆ



ದಾವಣಗೆರೆ, ಜು. 3- ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಪೈಕಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಯೋಜನೆಯಿಂದಾಗಿ ಆಟೋ ಚಾಲಕರು, ಮಾಲೀಕರು ಸಂಕಷ್ಟಕ್ಕೀಡಾಗಿದ್ದು, ಅವರ ನೆರವಿಗೆ ಬರುವಂತೆ ಶ್ರೀ ಕೃಷ್ಣ ಸಾರಥಿ ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ ಮಾಲೀಕರ ಸಂಘದ ನೇತೃತ್ವದಲ್ಲಿ ನಗರದಲ್ಲಿ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಚಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಪ್ರತಿಭಟನಾ ರ್‍ಯಾಲಿ ನಡೆಸಿದ ಆಟೋ ಚಾಲಕರು, ಜಿಲ್ಲಾಧಿಕಾರಿಗಳಿಗೆ ನಂತರ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ ಅವರ ಗೃಹ ಕಚೇರಿಗೆ ತೆರಳಿ ಕೂಡಲೇ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದರು.

ಉಚಿತ ಸಾರಿಗೆ ವ್ಯವಸ್ಥೆ ಮಾಡಿದ್ದರಿಂದ ಆಟೋ ಚಾಲಕರು, ಮಾಲೀಕರು ದುಡಿಮೆಯಿಲ್ಲದೇ ಬೀದಿಗೆ ಬರುವಂತಾಗಿದೆ. ಕೂಡಲೇ ನಗರ ಸಾರಿಗೆ ರದ್ದು ಮಾಡಿ ಆಟೋ ಚಾಲಕರಿಗೆ, ಮಾಲೀಕರಿಗೆ ಅನುಕೂಲ ಮಾಡಿಕೊಡುವಂತೆ ಆಗ್ರಹಿಸಿದರು.

ರಾಜ್ಯ ಆಟೋ ಚಾಲಕರ ಅಭಿವೃದ್ಧಿ ನಿಗಮ ರಚಿಸುವ ಮೂಲಕ ಮನೆ ಇಲ್ಲದವರಿಗೆ ವಸತಿ ಸೇರಿದಂತೆ, ಸರ್ಕಾರದ ಸವಲತ್ತುಗಳನ್ನು ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸರ್ಕಾರದ ವಿರುದ್ಧ ಉಗ್ರವಾದ ಹೋರಾಟ ನಡೆಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಶ್ರೀನಿವಾಸಮೂರ್ತಿ, ಹೆಚ್. ಪರಶುರಾಮ್ ನಂದಿಗಾವಿ, ಮಂಜುನಾಥ್ ಬಾಳೆಕಾಯಿ, ಎನ್.ಓ. ಸಂತೋಷ್, ಕುಮಾರ್, ಜಿ.ಎಸ್. ರುದ್ರೇಶ್, ಮಂಜುನಾಥ್ ಎಲ್ ಸಂಗೀತ್, ರಾಮು, ರಾಜು ಮತ್ತಿತರರು ಭಾಗವಹಿಸಿದ್ದರು.

# ಹರಪನಹಳ್ಳಿ : ರಸ್ತೆ ಅಪಘಾತದಲ್ಲಿ ಅಪರಿಚಿತ ವ್ಯಕ್ತಿಯ ಸಾವು

ಹರಪನಹಳ್ಳಿ, ಜು.3- ಹರಪನಹಳ್ಳಿ-ಹರಿಹರ ರಸ್ತೆಯ ಬಲಭಾಗದಲ್ಲಿ ಅಪಘಾತಕ್ಕೀಡಾಗಿ ಸುಮಾರು 65-70 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದು, ವಾರಸುದಾರರ ಪತ್ತೆಗೆ ಹರಪನಹಳ್ಳಿ ಪೊಲೀಸ್ ಠಾಣೆ ಮನವಿ ಮಾಡಿದೆ. ಜೂನ್ 24 ರ ರಾತ್ರಿ ಈ ಅಪಘಾತ ನಡೆದಿದ್ದು, ಚಿಕಿತ್ಸೆ ಫಲಕಾರಿಯಾಗದೇ ನಿನ್ನೆ ಸಂಜೆ ಆ ವ್ಯಕ್ತಿ ಮೃತಪಟ್ಟಿದ್ದಾನೆ. ಸಾಧಾರಣ ಮೈಕಟ್ಟು, ಬಿಳಿ ಕೂದಲು ಹಾಗೂ ಗೋದಿಗೆಂಪು ಬಣ್ಣ, ಹೊಂದಿದ್ದು, ಬಿಳಿ ಬಣ್ಣದ ತುಂಬು ತೋಳಿನ ಬನಿಯನ್, ನೀಲಿ ಬಣ್ಣದ ಪಟ್ಟಾ-ಪಟ್ಟಿ ಲುಂಗಿ, ಬೂದು ಬಣ್ಣದ ಡ್ರಾಯರ್ ಧರಿಸಿದ್ದಾನೆ.

# ಉತ್ತರಾಖಂಡ : ಮತ್ತೊಂದು ಹಳ್ಳಿಯಲ್ಲಿ ಬಿರುಕು

ಉತ್ತರಕಾಶಿ, ಜು. 3 – ಉತ್ತರಾಖಂಡದ ಜೋಶಿಮಠದಿಂದ 300 ಕಿ.ಮೀ. ದೂರದಲ್ಲಿರುವ ಮಸ್ತಾರಿ ಹಳ್ಳಿಯಲ್ಲಿ ರಸ್ತೆ ಹಾಗೂ ಗೋಡೆಗಳು ಬಿರುಕು ಬಿಟ್ಟಿವೆ. ಕಳೆದ ವರ್ಷ ಜೋಶಿಮಠದಲ್ಲಿ ನೆಲ ಬಿರುಕು ಬಿಟ್ಟಿದ್ದು ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿತ್ತು.

ವಿಕೋಪ ನಿರ್ವಹಣಾ ದಳ ಹಳ್ಳಿಗೆ ಭೇಟಿ ನೀಡಿದ್ದು, ಬಿರುಕಿನ ಪರಿಶೀಲನೆ ನಡೆಸಿದೆ. ಜನರು ಎಚ್ಚರಿಕೆ ವಹಿಸಬೇಕು ಎಂದು ತಿಳಿಸಲಾಗಿದೆ.

ಹಳ್ಳಿಯಲ್ಲಿ ಭೂಕುಸಿತ ಉಂಟಾಗುತ್ತಲೇ ಇದೆ. ಆದರೆ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎಂದು ಮಸ್ತಾರಿ ಹಳ್ಳಿಯ ಸತ್ಯನಾರಾಯಣ ಸೆಮ್ವಾಲ್ ಹೇಳಿದ್ದಾರೆ.

1997ರಲ್ಲಿ ಭೂಗರ್ಭಶಾಸ್ತ್ರ ಪರಿಣಿತರು ಸ್ಥಳದ ಪರಿಶೀಲನೆ ನಡೆಸಿದ್ದರು. ಗ್ರಾಮಸ್ಥರು ಸುರಕ್ಷಿತ ಸ್ಥಳಕ್ಕೆ ತೆರಳಬೇಕೆಂದು ಅವರು ಸಲಹೆ ನೀಡಿದ್ದರು.

# ರೋಟರಿ, ಇನ್ನರ್‌ವ್ಹೀಲ್ ಸಂಸ್ಥೆಯ ಪದಗ್ರಹಣ




ದಾವಣಗೆರೆ, ಜು. 3 - ದಾವಣಗೆರೆ ವಿದ್ಯಾನಗರ ರೋಟರಿ ಮತ್ತು ಇನ್ನರ್‌ವ್ಹೀಲ್ ಸಂಸ್ಥೆಯ ಪದಗ್ರಹಣ ಕಾರ್ಯಕ್ರಮವು ಮಾಗನೂರು ಬಸಪ್ಪ ರೋಟರಿ ಭವನದಲ್ಲಿ ಇಂದು ನಡೆಯಿತು. 2023-24ನೇ ಸಾಲಿನ ರೋಟರಿಯ ಅಧ್ಯಕ್ಷರಾಗಿ ಹೆಚ್.ಕೆ. ಕಲ್ಲಪ್ಪ ಮತ್ತು ಕಾರ್ಯದರ್ಶಿಯಾಗಿ ಹೆಚ್.ಎಂ. ಜಯಣ್ಣ, ಇನ್ನರ್‌ವ್ಹೀಲ್ ಅಧ್ಯಕ್ಷೆಯಾಗಿ ಮಂಜುಳಾ ಕರ್ಜಗಿ ಮತ್ತು ಕಾರ್ಯದರ್ಶಿಯಾಗಿ ಪ್ರೇಮ ಮಹೇಶ್ವರಪ್ಪ ಪದಗ್ರಹಣ ಮಾಡಿದರು. ಮಾಗನೂರು ಸಂಗಮೇಶಗೌಡ್ರು ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾಗಿ ರೋಟರಿ ಕೆ.ಎಸ್. ನಾಗೇಂದ್ರ ಮತ್ತು ಇನ್ನರ್‌ವ್ಹೀಲ್ ಡಿಸ್ಟಿಕ್ಟ್ ಟ್ರೇಜರರ ಶೋಭಾ ಶಿವರಾಜ ಭಾಗವಹಿಸಿದ್ದರು. ರೋಟರಿ ಮಾಜಿ ರಾಜ್ಯಪಾಲರಾದ ಆರ್.ಎಸ್. ನಾರಾಯಣಸ್ವಾಮಿ, ಪಿಹೆಚ್‌ಎಫ್ ವಿಶ್ವಜಿತ್ ಜಾಧವ್, ಎನ್.ಬಿ. ಮೃತ್ಯಂ ಜಯಪ್ಪ. 2023-24 ಸಾಲಿನ ಹೊಸ ಎ.ಜಿ. ಆನಂದ ಕುಮಾರ, ಚಾರ್ಟರ್ ಸುಲೋಚನಾ ರಾಜಶೇಖರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಶೇ.76ರಷ್ಟು 2,000 ರೂ. ನೋಟುಗಳು ವಾಪಸ್



ಮುಂಬೈ, ಜು. 3 – ಚಲಾವಣೆಯಲ್ಲಿದ್ದ ಶೇ.76ರಷ್ಟು 2,000 ರೂ.ಗಳ ನೋಟುಗಳು ಬ್ಯಾಂಕಿಗೆ ಮರಳಿವೆ. ಬಹುತೇಕ ಹಣವನ್ನು ಠೇವಣಿ ಮಾಡಲಾಗಿದೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ.

ಮೇ 19ರಂದು ರಿಸರ್ವ್ ಬ್ಯಾಂಕ್ 2,000 ರೂ.ಗಳ ನೋಟುಗಳನ್ನು ಚಲಾವಣೆಯಿಂದ ವಾಪಸ್ ಪಡೆದಿತ್ತು. ಇವುಗಳನ್ನು ಬ್ಯಾಂಕುಗಳಲ್ಲಿ ವಿನಿಮಯ ಮಾಡಿಕೊಳ್ಳಲು ಸೆಪ್ಟೆಂಬರ್ 30ರವರೆಗೆ ಅವಕಾಶ ನೀಡಲಾಗಿದೆ.

ಜೂನ್ 30ರವರೆಗೆ 2.72 ಲಕ್ಷ ಕೋಟಿ ರೂ. ಮೌಲ್ಯದ ನೋಟುಗಳನ್ನು ಜಮಾ ಮಾಡಲಾಗಿದೆ. ಆನಂತರದಲ್ಲಿ 84 ಲಕ್ಷ ಕೋಟಿ ರೂ. ಮೌಲ್ಯದ 2,000 ರೂ. ನೋಟುಗಳು ಮಾತ್ರ ಚಲಾವಣೆಯಲ್ಲಿವೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ಬ್ಯಾಂಕುಗಳಿಗೆ ಬಂದ ಹಣದ ಪೈಕಿ ಶೇ.87ರಷ್ಟನ್ನು ಠೇವಣಿ ಮಾಡಲಾಗಿದೆ. ಶೇ.13ರಷ್ಟು ಹಣವನ್ನು ಬೇರೆ ನೋಟುಗಳಿಗೆ ವಿನಿಮಯ ಮಾಡಿಕೊಳ್ಳಲಾಗಿದೆ.

# ಜಗಳೂರಿನಲ್ಲಿ ಇಂದು ಆರೋಗ್ಯ ತಪಾಸಣೆ, ಸಮಾಲೋಚನಾ ವೈದ್ಯಕೀಯ ಶಿಬಿರ

ಕೆ.ಎಂ. ಕಲ್ಲಯ್ಯ ಮೆಮೋರಿಯಲ್ ಹೆಲ್ತ್ ಕೇರ್ ಸೆಂಟರ್, ಗೌರವಿ ಆರ್ಕೇಡ್‌ನ 5ನೇ ವಾರ್ಷಿಕೋತ್ಸವನ್ನು ಇಂದು ಮಧ್ಯಾಹ್ನ 12.30 ಕ್ಕೆ ಹಮ್ಮಿಕೊಳ್ಳಲಾಗಿದೆ. ತಪೋಕ್ಷೇತ್ರ ಕಣ್ವಕುಪ್ಪೆ ಗವಿಮಠದ ಶ್ರೀ ಡಾ. ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಡೆಯುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಶಾಸಕ ಟಿ. ಗುರುಸಿದ್ದನಗೌಡರು ವಹಿಸುವರು.

ಈ ಸಂದರ್ಭದಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ಬೆಂಗಳೂರಿನ ಐ ವಿ ಎಫ್ ಸಂಸ್ಥೆಯಿಂದ ಬಂಜೆತನ ನಿವಾರಣೆಗೆ, ಸ್ಪೈರ್ ಕ್ಲಿನಿಕ್ ಅವರಿಂದ ಮೊಣಕಾಲು ಮರುಜೋಡಣೆಗೆ, ಚಿತ್ರದುರ್ಗದ ಎಸ್ ಜೆ ಎಂ ಇಂಡಿಯಾನಾದಿಂದ ಹೃದಯ ಆರೋಗ್ಯಕ್ಕೆ, ಪ್ರೀತಿ ಆರೈಕೆ ಟ್ರಸ್ಟ್ ವತಿಯಿಂದ ಡಾ. ಟಿ. ಜಿ. ರವಿಕುಮಾರ್ ಅವರು ಸಾಮಾನ್ಯ ರೋಗಗಳಿಗೆ ಮತ್ತು ದಂತ ಚಿಕಿತ್ಸೆಗಳಿಗೆ (ಹಿರಿಯರಿಗೆ ಹಲ್ಲಿನ ಸೆಟ್ ಮತ್ತು ಮಕ್ಕಳಿಗೆ ಉಬ್ಬು ಹಲ್ಲಿಗೆ ಕ್ಲಿಪ್) ಗಳಿಗೆ ಡಾ. ದೀಪಶ್ರೀ ಅವರಿಂದ ಉಚಿತ ತಪಾಸಣೆ ಮತ್ತು ಸಮಾಲೋಚನಾ ವೈದ್ಯಕೀಯ ಶಿಬಿರ ಮತ್ತು ಕರ್ನಾಟಕ ಹಿಮೊಫಿಲಿಯಾ ಸೊಸೈಟಿ ಮತ್ತು ಲೈಫ್ ಲೈನ್ ಬ್ಲಡ್ ಬ್ಯಾಂಕ್ ದಾವಣಗೆರೆ ಇವರಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಮ್ಮಿಕೊಂಡಿದ್ದೇವೆ ಎಂದು ಕೇಂದ್ರದ ವೈದ್ಯ ಡಾ.ಹಾಲಸ್ವಾಮಿ ವಿ.ಕಂಬಾಳಿಮಠ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿಶ್ವಛಾಯಾಗ್ರಹಣ ದಿನಾಚರಣೆ

ಫೋಟೋಗ್ರಾಫರ್ ಯೂತ್ ವೆಲ್‌ಫೇರ್ ಅಸೋಸಿಯೇಷನ್ ವತಿಯಿಂದ ವಿಶ್ವಛಾಯಾಗ್ರಹಣ ದಿನಾಚರಣೆ ಹಾಗೂ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ಇಂದು ಬೆಳಿಗ್ಗೆ 10 ಗಂಟೆಗೆ ರೋಟರಿ ಬಾಲಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ವಿಜಯ್ ಜಾಧವ್ ಅಧ್ಯಕ್ಷತೆ ವಹಿಸಲಿದ್ದು, ಶ್ರೀನಾಥ ಪಿ. ಅಗಡಿ, ಕಾರ್ಯದರ್ಶಿ ದುಗ್ಗಪ್ಪ, ಖಜಾಂಚಿ ಮಲ್ಲಿಕಾರ್ಜುನ್ ಮತ್ತು ಆಡಳಿತ ಮಂಡಳಿಯ ಎಲ್ಲ ನಿರ್ದೇಶಕರು ಪಾಲ್ಗೊಳ್ಳಲಿದ್ದಾರೆ.

# ರಾಜೀ ಸಂಧಾನವು ಎರಡೂ ಪಕ್ಷಗಾರರಿಗೆ ಲಾಭ

## ಜುಲೈ 8ರಂದು ಲೋಕ ಅದಾಲತ್: ಪ್ರಚಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾ ನ್ಯಾಯಾಧೀಶರಾದ ರಾಜೇಶ್ವರಿ



ದಾವಣಗೆರೆ, ಜು. 3- ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಭಾಗವಹಿಸಿ ರಾಜೀ ಸಂಧಾನ ಮಾಡಿಕೊಳ್ಳುವ ಮೂಲಕ ವಿವಾದಗಳನ್ನು ಇತ್ಯರ್ಥಪಡಿಸುವುದರಿಂದ ಎರಡೂ ಪಕ್ಷಗಾರರಿಗೆ ಲಾಭವಾಗುತ್ತದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ರಾಜೇಶ್ವರಿ ಎನ್.ಹೆಗಡೆ ತಿಳಿಸಿದರು.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದಲ್ಲಿ ಇದೇ ದಿನಾಂಕ 8 ರಂದು ನಡೆಯುವ ರಾಷ್ಟ್ರೀಯ ಲೋಕ ಅದಾಲತ್ ಕುರಿತು ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಇಂದು ಏರ್ಪಾಡಾಗಿದ್ದ ಸಾರ್ವಜನಿಕರಿಗೆ ಮಾಹಿತಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಲೋಕ್ ಅದಾಲತ್‌ನಲ್ಲಿ ಹೆಚ್ಚು ಪ್ರಕರಣಗಳು ಇತ್ಯರ್ಥವಾಗುವಂತೆ ನೋಡಿಕೊಳ್ಳಬೇಕು. ಇದಕ್ಕೆ ಎಲ್ಲಾ ವಕೀಲರ ಸಹಕಾರ ಬಹಳ ಮುಖ್ಯವಾಗಿರುತ್ತದೆ. ರಾಜೀ ಸಂಧಾನದ ಮೂಲಕ ಇತ್ಯರ್ಥವಾಗುವ ಎಲ್ಲಾ ಪ್ರಕರಣಗಳಲ್ಲಿ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ತೆಗೆದುಕೊಳ್ಳಲಾಗುತ್ತದೆ. ಸಾರ್ವಜನಿಕರು ಇದರ ಲಾಭ ಪಡೆಯುವ ಮೂಲಕ ಯಶಸ್ಸಿಗೆ ಸಹಕರಿಸಬೇಕೆಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ಮಾತನಾಡಿ, ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಕಡಿಮೆ ಖರ್ಚಿನಲ್ಲಿ ಶೀಘ್ರವಾಗಿ ಪರಿಹರಿಸಿಕೊಳ್ಳಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಿದ್ದು, ರಾಜೀಯಾಗಬಲ್ಲ ಹೆಚ್ಚಿನ ಪ್ರಕರಣಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದು ಮತ್ತು ರಾಜೀ ಪೂರ್ವ ಸಮಾಲೋಚನೆಗಳನ್ನು ನಡೆಸಬಹುದು ಎಂದು ಹೇಳಿದರು.

ಇದೇ ದಿನಾಂಕ 8 ರಂದು ನಡೆಯುವ ರಾಷ್ಟ್ರೀಯ ಲೋಕ್ ಅದಾಲತ್ ಕುರಿತು ಸಾರ್ವಜನಿಕರಿಗೆ ಮಾಹಿತಿ ಮತ್ತು ಅರಿವು ಮೂಡಿಸಲು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ, ಆಟೋ ರಿಕ್ಷಾಗೆ ಧ್ವನಿ ವರ್ಧಕವನ್ನು ಅಳವಡಿಸಿ ನಗರದೆಲ್ಲೆಡೆ ಪ್ರಚಾರ ಕೈಗೊಳ್ಳಲಾಯಿತು ಹಾಗೂ ಸಾರ್ವಜನಿಕರಿಗೆ ಭಿತ್ತಿ ಪತ್ರಗಳನ್ನು ಹಂಚಲಾಯಿತು.

ಸಾರ್ವಜನಿಕರು ರಾಷ್ಟ್ರೀಯ ಲೋಕ್ ಅದಾಲತ್ ಅನ್ನು ಸಂಪೂರ್ಣ ಸದುಪಯೋಗ ಪಡೆದುಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಹಳೆಯ ನ್ಯಾಯಾಲಯ ಸಂಕೀರ್ಣದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಾವಣಗೆರೆ ಇವರ ದೂರವಾಣಿ ಸಂಖ್ಯೆ 08192-296364, ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಹರಿಹರ ದೂರವಾಣಿ ಸಂಖ್ಯೆ: 08192-296885, ಹೊನ್ನಾಳಿ ದೂರವಾಣಿ ಸಂಖ್ಯೆ: 08188-251732, ಚನ್ನಗಿರಿ ದೂರವಾಣಿ ಸಂಖ್ಯೆ 08189-229195 ಮತ್ತು ಜಗಳೂರು ದೂರವಾಣಿ ಸಂಖ್ಯೆ: 08196-227600 ಮೂಲಕ ಸಂಪರ್ಕಿಸಬಹುದು ಎಂದು ತಿಳಿಸಿದರು.

ನ್ಯಾಯಾಧೀಶರಾದ ವಿಜಯಾನಂದ, ಪ್ರವೀಣ್ ಕುಮಾರ್, ಎನ್.ಶ್ರೀಪಾದ್, ನಿವೇದಿತಾ, ರೇಷ್ಮಾ, ಅಫ್ತಾಬ್, ಸಮೀರ್ ಕೊಳ್ಳಿ, ಪ್ರಶಾಂತ, ಮಲ್ಲಿಕಾರ್ಜುನ, ಸಿದ್ದರಾಜು ಸೇರಿದಂತೆ ಜಿಲ್ಲಾ ನ್ಯಾಯಾಲಯಗಳ ನ್ಯಾಯಾಧೀಶರು ಇದ್ದರು.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಶಿವಪ್ಪ ಸಲಗೇರಿ, 1ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶ ವಿಜಯಾನಂದ, 2ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶ ಶ್ರೀನಿವಾಸ, ಕೌಟುಂಬಿಕ ನ್ಯಾಯಾಧೀಶ ದಶರಥ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್, ಸಂಘದ ಪದಾಧಿಕಾರಿಗಳಾದ ಜಿ.ಕೆ.ಬಸವರಾಜ್ ಗೋಪನಾಳು, ಎ.ಎಸ್.ಮಂಜುನಾಥ್, ಎಸ್.ಬಸವರಾಜ್, ಚೌಡಪ್ಪ, ನಾಗರಾಜ್, ಭಾಗ್ಯಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

# ನಗರದಲ್ಲಿ ನಾಡಿದ್ದು ಸಿಲ್ಕ್ ಇಂಡಿಯ-2023



ದಾವಣಗೆರೆ, ಜು. 3- ಅಭಿವೃದ್ಧಿ ಸಂಸ್ಥೆಯಿಂದ ನಗರದ ಪೂಜಾ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ಆಷಾಢ ಮಾಸ, ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ 'ಸಿಲ್ಕ್ ಇಂಡಿಯ-2023' ಮೇಳ ಆಯೋಜಿಸಲಾಗಿದೆ.

ಇದೇ ದಿನಾಂಕ 6 ರಿಂದ 11ರವರೆಗೆ 6 ದಿನಗಳ ಕಾಲ ನಡೆಯಲಿರುವ ಈ ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳು 60ಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ಪ್ರದರ್ಶಿಸಿ, ಮಾರಾಟ ಮಾಡಲಿದ್ದಾರೆ.

ತಸ್ಸರ್‌ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ, ಧರ್ಮಾವರಂ, ಕಾಂಚಿಪುರಂ, ರಾ ಸಿಲ್ಕ್ ಮತ್ತು ಕೋಸಾ, ಕೊಲ್ಕೊತ್ತಾ ಗಣಪತಿ, ಢಾಕ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಬಾಲು ಚೆರಿ ರೇಷ್ಮೆ ಮಟ್ಕಾ, ಪ್ರಿಂಟೆಡ್, ಪಶ್ಮೀನಾ ಸೀರೆಗಳು, ಡಿಸೈನರ್ ಡ್ರೆಸ್ ಮೇಟಿರಿಯಲ್‌ಗಳು, ಬಾಗಲ್‌ಪುರ್ ರೇಷ್ಮೆ ಸೀರೆ ಮತ್ತು ಡ್ರೆಸ್, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಹೇಶ್ವರಿ ಮತ್ತು ಕೋಟಾ ಸಿಲ್ಕ್, ಟೆಂಪಲ್ ಬಾರ್ಡರ್ ಉಳ್ಳ ಮಲ್ಬೆರಿ ಸಿಲ್ಕ್, ಕೊಲ್ಕೋತ್ತಾ ರೇಷ್ಮೆ ಸೀರೆಗಳು, ಬನಾರಸ್ ಮತ್ತು ಜಮ್‌ದಾನಿ ರೇಷ್ಮೆ ಶಿಫಾನ್ ಸೀರೆಗಳು, ಬುಟ್ಟಾ ಸೀರೆಗಳು, ಚಂದೇರಿ ಸಿಲ್ಕ್ ಮತ್ತು ಕೈ ಅಚ್ಚಿನ ಸೀರೆಗಳು ಪ್ರದರ್ಶನಗೊಳ್ಳಲಿವೆ.

ಈ ಪ್ರದ ರ್ಶನದಲ್ಲಿ 23 ರಾಜ್ಯಗಳ ರೇಷ್ಮೆ ಸೀರೆಗಳಿರುತ್ತವೆ.

ಜೊತೆಗೆ ಕುರ್ತಾ, ಸ್ಟೋಲ್ಸ್, ಶಾಲುಗಳು, ಸಲ್‌ವಾರ್ ಕಮೀಜ್ ಮತ್ತು ಉಡುಪಿನ ಬಟ್ಟೆಗಳು, ಕುಶನ್ ಕವರ್‌ಗಳು ಮತ್ತು ಬೆಡ್‌ಶೀಟ್‌ಗಳು ಇರಲಿವೆ.

## ಭದ್ರಾ ಜಲಾಶಯ ನೀರಿನ ಮಟ್ಟ ಇಳಿಕೆ

ಶಿವಮೊಗ್ಗ, ಜು. 3 - ಮಧ್ಯ ಕರ್ನಾಟಕದ ಜೀವನಾಡಿಯಾಗಿರುವ ಭದ್ರಾ ಜಲಾಶಯಕ್ಕೆ ಒಳ ಹರಿವು ಇಲ್ಲದ ಕಾರಣ ನೀರಿನ ಮಟ್ಟ 136 ಅಡಿ 10 ಇಂಚಿಗೆ ಇಳಿಕೆ ಕಂಡಿದೆ. ಇದರಿಂದಾಗಿ ಡ್ಯಾಂ ಖಾಲಿಯಾಗಿ ಕಾಣುತ್ತಿದೆ. ಮಲೆನಾಡಿನಲ್ಲಿ ಮಳೆ ಜೋರಾಗಿ ಸುರಿಯದ ಕಾರಣ ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದು ಮತ್ತು ಇದುವರೆಗೂ ಒಳಹರಿವು ಬಾರದಿರುವುದಕ್ಕೆ ಅಚ್ಚುಕಟ್ಟಿನ ರೈತರಲ್ಲಿ ಆತಂಕ ಸೃಷ್ಟಿಸಿದೆ. ಕಳೆದ ವರ್ಷ ಈ ದಿನ ಜಲಾಶಯದಲ್ಲಿ 154 ಅಡಿ 3 ಇಂಚು ನೀರಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಡ್ಯಾಂನಲ್ಲಿ 17 ಅಡಿ ನೀರು ಕಡಿಮೆ ಇದೆ. ಜಲಾಶಯದ ಇತಿಹಾಸದಲ್ಲಿ ಆಗಸ್ಟ್ ತಿಂಗಳಲ್ಲೇ ಹೆಚ್ಚು ಮಳೆ ಸುರಿದು ಡ್ಯಾಂ ಭರ್ತಿಯಾಗಿರುವ ಉದಾಹರಣೆಗಳು ಇದ್ದು ರೈತರು ಆತಂಕ ಪಡಬೇಕಾಗಿಲ್ಲ ಎಂದು ಅನುಭವಿಗಳು ಹೇಳಿದ್ದಾರೆ.


ಶ್ರೀ ಜಯಪ್ರಕಾಶ್ ನಾರಾಯಣ ವಿದ್ಯಾಸಂಸ್ಥೆ (ರಿ) ಐಗೂರು.

ಶ್ರೀ ಆರ್.ಜಿ. ನಂಜಪ್ಪ ಪ್ರೌಢಶಾಲೆ, ರಾಂಪುರ, ನಾಗರಕಟ್ಟೆ.

ನೇಮಕಾತಿ ತಿದ್ದುಪಡಿ ಪ್ರಕಟಣೆ

ಉಲ್ಲೇಖ : ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಜ್ಞಾಪನಾ ಸಂಖ್ಯೆ : ಸಿ8 (3) ಖಾ.ಹು.ಭ.ಅ.ಇ-1053026, 2022-23 ದಿನಾಂಕ : 17.05.2023 ಪ್ರಕಾರ ನಮ್ಮ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಆರ್.ಜಿ. ನಂಜಪ್ಪ ಪ್ರೌಢಶಾಲೆ, ರಾಂಪುರ, ನಾಗರಕಟ್ಟೆ, ದಾವಣಗೆರೆ (ತಾ) (ಜಿ). ಅನುದಾನಿತ ಪ್ರೌಢಶಾಲೆಯಲ್ಲಿ ಖಾಲಿ ಇರುವ ಈ ಕೆಳಗೆ ಕಾಣಿಸಿದ ಸಹ ಶಿಕ್ಷಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ ಬಗ್ಗೆ ದಿ. ; 29.06.2023 ರಂದು ಪ್ರಕಟಣೆಗೊಂಡ ಜಾಹೀರಾತಿನಲ್ಲಿ ಅನುಮತಿಸಿದ ವಿಷಯ ಸಹ ಶಿಕ್ಷಕರು-ವಿಜ್ಞಾನ ಹುದ್ದೆಗೆ ವಿದ್ಯಾರ್ಹತೆಯು ಬಿ.ಎ., ಬಿ.ಇಡಿ., (ಸಿಬಿಜೆಡ್) ಎಂದು ತಪ್ಪಾಗಿದ್ದು, ಅದನ್ನು ಬಿ.ಎಸ್.ಸಿ.,ಬಿ.ಇಡಿ., (ಸಿಬಿಜೆಡ್) ಎಂದು ಓದಿಕೊಳ್ಳಲು ವಿನಂತಿ.

ಮೊ. : 7338641006, 8310762705
ದಿನಾಂಕ : 04.07.2023

ಸಹಿ/- ಕಾರ್ಯದರ್ಶಿ
ಶ್ರೀ ಜಯಪ್ರಕಾಶ್ ನಾರಾಯಣ ವಿದ್ಯಾಸಂಸ್ಥೆ (ರಿ.) ಐಗೂರು.





